**ಕರ್ನಾಟಕ ವಿಧಾನ ಪರಿಷತ್ತಿನ ಸನ್ಮಾನ್ಯ ಸಭಾಪತಿಗಳೇ,**

**ಕರ್ನಾಟಕ ವಿಧಾನ ಸಭೆಯ ಸನ್ಮಾನ್ಯ ಸಭಾಧ್ಯಕ್ಷರೇ,**

**ಸನ್ಮಾನ್ಯ ಮುಖ್ಯಮಂತ್ರಿಯವರೇ,**

**ಸನ್ಮಾನ್ಯ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರೇ,**

**ಸನ್ಮಾನ್ಯ ವಿಧಾನ ಸಭೆಯ ವಿರೋಧ ಪಕ್ಷದ ನಾಯಕರೇ,**

**ಸನ್ಮಾನ್ಯ ಸಚಿವರೇ ಹಾಗೂ ಕರ್ನಾಟಕ ವಿಧಾನ ಮಂಡಲದ ಸನ್ಮಾನ್ಯ ಸದಸ್ಯರೇ,**

1. ಕರ್ನಾಟಕ ವಿಧಾನ ಮಂಡಲದ ಈ ಜಂಟಿ ಅಧಿವೇಶನಕ್ಕೆ ತಮ್ಮೆಲ್ಲರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

2. ನನ್ನ ಸರ್ಕಾರವು, ಬಡವರು, ದುರ್ಬಲ ವರ್ಗದವರು ಮತ್ತು ಅವಕಾಶ ವಂಚಿತರ ಕಲ್ಯಾಣ ಮತ್ತು ಅಭಿವೃದ್ಧಿಗೆ ಬದ್ಧವಾಗಿದೆ ಎಂಬುದು ತಮ್ಮೆಲ್ಲರಿಗೂ ತಿಳಿದ ವಿಚಾರವಾಗಿದೆ. ಕಳೆದ 4 ವರ್ಷಗಳಲ್ಲಿ ನನ್ನ ಸರ್ಕಾರವು, ಸಂಪತ್ತು, ಅವಕಾಶ ಮತ್ತು ಅಧಿಕಾರದಲ್ಲಿ ಸರ್ವರಿಗೂ ಸಮಪಾಲು ಸಿಗಬೇಕೆಂಬ ಸರ್ವೋದಯದ ಆಶಯದ ಮೇಲೆ ಅಭಿವೃದ್ಧಿಯನ್ನು ಸಾಕಾರಗೊಳಿಸುವುದಕ್ಕೆ ಅತ್ಯಂತ ಖಚಿತ, ನಿರ್ಣಾಯಕ ಮತ್ತು ಸಮರ್ಥ ಕ್ರಮಗಳನ್ನು ಕೈಗೊಂಡಿದೆ.

3. ಕಾವೇರಿ ಮತ್ತು ಮಹದಾಯಿ ಜಲ ವಿವಾದಗಳಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಆದೇಶಗಳು ಒಡ್ಡಿರುವ ಗಂಭೀರವಾದ ಸವಾಲುಗಳನ್ನು ಎದುರಿಸಿ, ನನ್ನ ಸರ್ಕಾರವು, ರಾಜ್ಯದ ನೆಲ, ಜಲ ಮತ್ತು ಭಾಷೆಯನ್ನು ಸಂರಕ್ಷಿಸಲು ರಾಜ್ಯದ ಜನತೆಯೊಂದಿಗೆ ಅಚಲವಾಗಿ ನಿಂತಿದೆ. ಕಾವೇರಿ, ಕೃಷ್ಣಾ ಮತ್ತು ಮಹದಾಯಿ ನದಿಗಳ ನೀರು ಹಂಚಿಕೆಯಲ್ಲಿ ಕರ್ನಾಟಕ ಜನತೆಯ ನ್ಯಾಯಬದ್ಧ ಪಾಲನ್ನು ಪಡೆಯುವುದಕ್ಕೆ ಬದ್ಧವಾಗಿದೆ. ನನ್ನ ಸರ್ಕಾರವು, ಪ್ರತಿಭಟನೆ ಸಂದರ್ಭದಲ್ಲಿ ಉಂಟಾದ ಒಂದೆರಡು ಕಾನೂನುಭಂಗ ಘಟನೆಗಳನ್ನು ಕೂಡಾ ಸಮರ್ಥವಾಗಿ ನಿರ್ವಹಿಸಿ ರಾಜ್ಯದಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಬಂದಿದೆ.

4. ಜನಪರ, ಪಾರದರ್ಶಕ ಮತ್ತು ಪರಿಣಾಮಕಾರಿ ಆಡಳಿತ ನೀಡುವುದಕ್ಕೆ ಅನುವಾಗುವಂತೆ ಭ್ರಷ್ಟಾಚಾರ ನಿಗ್ರಹ ಮತ್ತು ವಿಚಕ್ಷಣಾ ಸಿಬ್ಬಂದಿಯನ್ನು ಬಲಪಡಿಸುವ ದೃಷ್ಟಿಯಿಂದ ನನ್ನ ಸರ್ಕಾರವು, ಒಂದು ಸ್ವಾಯತ್ತ ಭ್ರಷ್ಟಾಚಾರ ನಿಗ್ರಹದಳವನ್ನು ಸ್ಥಾಪಿಸಿದೆ. ಅತ್ಯಂತ ಕಡಿಮೆ ಅವಧಿಯಲ್ಲಿ, ಭ್ರಷ್ಟಾಚಾರ ನಿಗ್ರಹದಳವು ಸ್ವೀಕರಿಸಿದ 3401 ಅರ್ಜಿಗಳ ಪೈಕಿ 2294 ಅರ್ಜಿಗಳನ್ನು ವಿಲೇ ಮಾಡಿದೆ. 100 ಪತ್ತೆ ಮಾಡಿದ ಪ್ರಕರಣಗಳು, 32 ದಾಳಿ ಪ್ರಕರಣಗಳು ಮತ್ತು 21 ಶೋಧನೆ ಮಾಡಿದ ಪ್ರಕರಣಗಳೂ ಸೇರಿದಂತೆ 153 ಪ್ರಕರಣಗಳನ್ನು ದಾಖಲು ಮಾಡಿಕೊಂಡಿದೆ. ಮಾನವ ಸಂಪನ್ಮೂಲ ಹಾಗೂ ಇತರೆ ಅಗತ್ಯ ಸೌಲಭ್ಯಗಳೊಂದಿಗೆ ಎಲ್ಲಾ ಜಿಲ್ಲೆಗಳಲ್ಲಿ ಭ್ರಷ್ಟಾಚಾರ ನಿಗ್ರಹದಳದ ಕಛೇರಿಗಳು ಕಾರ್ಯ ನಿರ್ವಹಿಸುತ್ತಿವೆ. ಹೆಚ್ಚುವರಿಯಾಗಿ ನನ್ನ ಸರ್ಕಾರವು, ಎಲ್ಲಾ

ಇಲಾಖೆಗಳಲ್ಲಿ ವಿಚಕ್ಷಣಾ ಕೋಶಗಳನ್ನು ಸ್ಥಾಪಿಸಿದೆ. ಕಳೆದ ಒಂದು ವರ್ಷದ ಅವಧಿಯಲ್ಲಿ, ನನ್ನ ಸರ್ಕಾರವು, ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಹಲವು ಪ್ರಕರಣಗಳ ಬಗ್ಗೆ ಕ್ರಮ ಜರುಗಿಸಲು ಅನುಮತಿ ನೀಡಿದೆ.

5. ನನ್ನ ಸರ್ಕಾರವು, ಪೊಲೀಸ್ ಇಲಾಖೆಯನ್ನು ಬಲಗೊಳಿಸಲು ಹಾಗೂ ಆಧುನಿಕ ರೀತಿಯಲ್ಲಿ ಸಜ್ಜುಗೊಳಿಸುವ ಹಲವು ಕ್ರಮಗಳನ್ನು ತೆಗೆದುಕೊಂಡಿದೆ. ಪೊಲೀಸ್ ಇಲಾಖೆಯ ಆಧುನೀಕರಣಕ್ಕಾಗಿ 475 ಕೋಟಿ ರೂ.ಗಳ ವೆಚ್ಚದಲ್ಲಿ 72 ಪೊಲೀಸ್ ಠಾಣೆಗಳನ್ನು, 5 ಪೊಲೀಸ್ ತರಬೇತಿ ಶಾಲೆಗಳನ್ನು, 10 ಪೊಲೀಸ್ ಔಟ್–ಪೋಸ್ಟ್‌ಗಳನ್ನು, 13 ಬ್ಯಾರಕ್‌ಗಳನ್ನು, 87 ವಸತಿಯೇತರ ಕಟ್ಟಡಗಳನ್ನು ಹಾಗೂ 72 ಇತರೆ ಕಾಮಗಾರಿಗಳನ್ನು ಪೂರ್ಣಗೊಳಿಸಿದೆ. 2015–16ನೇ ಸಾಲಿನಲ್ಲಿ, 282 ಪೊಲೀಸ್ ಸಬ್‌ಇನ್ಸ್‌ಪೆಕ್ಟರ್‌ಗಳು ಹಾಗೂ 5653 ಪೊಲೀಸ್ ಕಾನ್ಸ್‌ಟೇಬಲ್‌ಗಳನ್ನು ನೇಮಕ ಮಾಡಿಕೊಳ್ಳಲಾಗಿದೆ. ಅಲ್ಲದೆ ಪ್ರಸಕ್ತ ಸಾಲಿನಲ್ಲಿ 8585 ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆಯನ್ನು ಆರಂಭಿಸಿದೆ.

6. ನನ್ನ ಸರ್ಕಾರವು, ಕಷ್ಟಕರ ಪರಿಸ್ಥಿತಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗಳಿಗಾಗಿ ಹಲವಾರು ಹೊಸ ರೀತಿಯ ಕಲ್ಯಾಣ ಕ್ರಮಗಳನ್ನು ಕೈಗೊಂಡಿದೆ. ಅವರು ಪಡೆಯುತ್ತಿದ್ದ ಮಾಸಿಕ ಭತ್ಯೆಯನ್ನು 100 ರೂ.ಗಳಿಂದ 2100 ರೂ.ಗಳಿಗೆ ಹೆಚ್ಚಿಸಿದೆ. ಪೊಲೀಸ್

ಕಾನ್ಸ್‌ಟೇಬಲ್‌ಗಳು, ಹೆಡ್ ಕಾನ್ಸ್‌ಟೇಬಲ್‌ಗಳು ಮತ್ತು ಎ.ಎಸ್.ಐ. ಗಳಿಗೆ ಕಾಲಮಿತಿ ಬಡ್ತಿ ಯೋಜನೆಯನ್ನು ಆರಂಭಿಸಿದೆ. 46 ಕ್ಯಾಂಟೀನ್‌ಗಳ ಸ್ಥಾಪನೆಯೂ ಸೇರಿದಂತೆ ಪೊಲೀಸ್ ಸಿಬ್ಬಂದಿಗಳಿಗೆ 2782 ವಸತಿ ಗೃಹಗಳನ್ನು ನಿರ್ಮಿಸಿದೆ ಮತ್ತು 822 ಕೋಟಿ ರೂ.ಗಳ ವೆಚ್ಚದಲ್ಲಿ 4016 ವಸತಿ ಗೃಹಗಳನ್ನು ನಿರ್ಮಾಣ ಮಾಡಲು ಕ್ರಮ ಕೈಗೊಳ್ಳಲಾಗಿದೆ.

7. ನನ್ನ ಸರ್ಕಾರವು, ಹೈದರಾಬಾದ್-ಕರ್ನಾಟಕ ಪ್ರದೇಶದ ಜನರ ಅಭಿವೃದ್ಧಿಗೆ ಬದ್ಧವಾಗಿದೆ. ಸಂವಿಧಾನದ ಅನುಚ್ಛೇದ 371(ಜೆ)ನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ನನ್ನ ಸರ್ಕಾರವು ತೆಗೆದುಕೊಂಡಿರುವ ಕ್ರಮಗಳು ಇದಕ್ಕೆ ಸಾಕ್ಷಿಯಾಗಿವೆ. ಪ್ರಾದೇಶಿಕ ಅಸಮತೋಲನೆಗಳ ನಿವಾರಣೆಗಾಗಿ ಡಾ.ನಂಜುಂಡಪ್ಪ ಸಮಿತಿಯು ನೀಡಿದ ವರದಿಯ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ವಿಶೇಷ ಅಭಿವೃದ್ಧಿ ಯೋಜನೆ ಸಿದ್ಧಪಡಿಸಿ, ಇದಕ್ಕಾಗಿ ಪ್ರಸ್ತುತ ವರ್ಷದಲ್ಲಿ ವಿಶೇಷ ಅಭಿವೃದ್ಧಿ ಯೋಜನೆಗೆ 3000 ಕೋಟಿ ರೂ.ಗಳನ್ನು ಮತ್ತು ಹೈದರಾಬಾದ್-ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಗೆ 1000 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ. ಆ ಭಾಗದ ಪ್ರಾದೇಶಿಕ ಅಸಮತೋಲನವನ್ನು ಕಡಿಮೆ ಮಾಡಲು ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕಾಗಿ ನೇಮಕಾತಿಗಳಲ್ಲಿ ಮೀಸಲಾತಿ)ಆದೇಶ, 2013 ರ ಅಡಿಯಲ್ಲಿ ಇಲಾಖೆಗಳು ಮತ್ತು ಸಾರ್ವಜನಿಕ ವಲಯದ ಉದ್ಯಮಗಳಲ್ಲಿ ಆ ಪ್ರದೇಶದ ಸ್ಥಳೀಯ ಜನರಿಗಾಗಿ 50,301 ಹುದ್ದೆಗಳನ್ನು ಮೀಸಲಿರಿಸಲಾಗಿದೆ. ಇವುಗಳ ಪೈಕಿ,

12,326 ಹುದ್ದೆಗಳನ್ನು ಕಾರ್ಯನಿರತ ಸಿಬ್ಬಂದಿಗಳ ಮಿತಿಯಲ್ಲಿ ಭರ್ತಿ ಮಾಡಿಕೊಳ್ಳಲಾಗಿದೆ ಮತ್ತು 13,135 ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡಿಕೊಳ್ಳಲಾಗಿದೆ.

8. ಕರ್ನಾಟಕದಲ್ಲಿ ಕಳೆದ 6 ವರ್ಷಗಳಿಂದ ಹಿಂದೆಂದೂ ಕಾಣದ ಭೀಕರ ಬರಗಾಲದಿಂದ ರೈತರ ಬದುಕು ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ಪ್ರಸಕ್ತ ವರ್ಷದಲ್ಲಿ ಮುಂಗಾರು ಅವಧಿಯಲ್ಲಿ 139 ತಾಲೂಕುಗಳನ್ನು ಮತ್ತು ಹಿಂಗಾರು ಅವಧಿಯಲ್ಲಿ 160 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಿದೆ. ನನ್ನ ಸರ್ಕಾರವು, ನಿಗದಿತ ಸಮಯದಲ್ಲಿ ಬೆಳೆ ಸಹಾಯಧನ ವಿತರಿಸುವ ಮೂಲಕ ಬರಗಾಲವನ್ನು ಪರಿಣಾಮಕಾರಿಯಾಗಿ ನಿರ್ವಹಿಸಿದೆ. ಉದ್ಯೋಗ ಸೃಷ್ಠಿ ಕಾರ್ಯಕ್ರಮಗಳನ್ನು ಹೆಚ್ಚಿಸಿದೆ. ಜಾನುವಾರುಗಳಿಗೆ ಮೇವನ್ನು ಒದಗಿಸುವುದು ಮತ್ತು ಗ್ರಾಮಗಳು ಮತ್ತು ಪಟ್ಟಣಗಳಿಗೆ ಕುಡಿಯುವ ನೀರಿನ ಪೂರೈಕೆಯನ್ನು ಖಾತ್ರಿಪಡಿಸಿಕೊಂಡಿದೆ. ಬರ ಪರಿಹಾರಕ್ಕೆ ಮತ್ತು ಬರಪರಿಸ್ಥಿತಿಯನ್ನು ಕಡಿಮೆ ಮಾಡುವುದಕ್ಕೆ ಹೆಚ್ಚುವರಿ ಪೂರಕ ಕ್ರಮಗಳಿಗೆ ಏಪ್ರಿಲ್ 2016ರಿಂದ ಇಲ್ಲಿಯವರೆಗೆ 1195 ಕೋಟಿ ರೂ.ಗಳನ್ನು ಬಿಡುಗಡೆಗೊಳಿಸಿದೆ.

9. ಜಲ ಸಂರಕ್ಷಣೆ ಮತ್ತು ಜಲಾನಯನ ಪ್ರದೇಶ ನಿರ್ವಹಣೆಗೆ ವಿಶೇಷವಾಗಿ ಒತ್ತು ನೀಡುವುದರ ಮೂಲಕ ಮಾತ್ರ ಕೃಷಿಯ ದೀರ್ಘಾವಧಿ ಸುಸ್ಥಿರತೆ ಸಾಧ್ಯವಾಗುವುದು. ಕೃಷಿ ಭಾಗ್ಯ ಯೋಜನೆ ಅಡಿಯಲ್ಲಿ 1 ಲಕ್ಷ

ಕೃಷಿ ಹೊಂಡಗಳನ್ನು ಮತ್ತು 2450 ಶೆಡ್‌ನೆಟ್‌ಗಳು/ ಪಾಲಿಗೃಹಗಳನ್ನು ನಿರ್ಮಿಸಿದೆ. 3 ಲಕ್ಷ ಹೆಕ್ಟೇರುಗಳಿಗೂ ಹೆಚ್ಚಿನ ಪ್ರದೇಶದಲ್ಲಿ ನೀರಿನ ಸಮರ್ಪಕ ಬಳಕೆಗಾಗಿ ಹನಿ ಮತ್ತು ತುಂತುರು ನೀರಾವರಿ ಘಟಕಗಳನ್ನು ಸ್ಥಾಪಿಸಿದೆ. ಪ್ರಸಕ್ತ ವರ್ಷದಲ್ಲಿ ಜಲಾನಯನ ಪ್ರದೇಶದ 58,586 ಹೆಕ್ಟೇರುಗಳಷ್ಟು ಪ್ರದೇಶವನ್ನು ಅಭಿವೃದ್ಧಿಪಡಿಸಲು ನನ್ನ ಸರ್ಕಾರವು ಕ್ರಮಗಳನ್ನು ಕೈಗೊಂಡಿದೆ. ರಾಜ್ಯದ ಮಳೆ ಆಶ್ರಿತ ಪ್ರದೇಶವಾದ 129 ಲಕ್ಷ ಹೆಕ್ಟೇರುಗಳ ಪೈಕಿ 63 ಲಕ್ಷ ಹೆಕ್ಟೇರುಗಳ ಜಲಾನಯನ ಪ್ರದೇಶವನ್ನು ಅಭಿವೃದ್ಧಿಪಡಿಸಿದೆ. ಇದರ ಜೊತೆಗೆ ನನ್ನ ಸರ್ಕಾರವು, ಕಳೆದ 4 ವರ್ಷಗಳ ಅವಧಿಯಲ್ಲಿ, 3924 ಕೋಟಿ ರೂ. ವೆಚ್ಚದಲ್ಲಿ 921 ಕೆರೆಗಳನ್ನು ಭರ್ತಿ ಮಾಡುವ ಯೋಜನೆಗಳನ್ನು ಪೂರ್ಣಗೊಳಿಸಿದೆ. ಅಂತರ್ಜಲಮಟ್ಟ ತೀವ್ರವಾಗಿ ಕುಸಿತಗೊಂಡಿರುವುದನ್ನು ಗಮನದಲ್ಲಿಟ್ಟುಕೊಂಡು ನಾವು ಮಳೆಯಿಂದ ಬಿದ್ದ ನೀರು ಹರಿದುಹೋಗದಂತೆ ತಡೆಯಲು ಮಳೆ ನೀರು ಸಂಗ್ರಹಣೆಗಾಗಿ ಬಾಂದಾರುಗಳು, ಚೆಕ್ ಡ್ಯಾಮ್‌ಗಳು, ಪಿಕ್‌ಅಪ್‌ಗಳು, ಬ್ಯಾರೇಜ್‌ಗಳ ನಿರ್ಮಾಣಗಳಂಥ ಸಕಾರಾತ್ಮಕ ಕ್ರಮಗಳನ್ನು ಪ್ರಾರಂಭಿಸಿದ್ದೇವೆ.

10. ಪ್ರಕೃತಿ ವಿಕೋಪದಿಂದ ರೈತರಿಗೆ ಆಗುವ ತೊಂದರೆಗಳನ್ನು ಎದುರಿಸಲು ಬೆಳೆವಿಮೆ ನೆರವಾಗುತ್ತಿದೆ. ನನ್ನ ಸರ್ಕಾರವು, ಮುಂಗಾರು ಅವಧಿಯಲ್ಲಿ ಬೆಳೆವಿಮೆ ಯೋಜನೆ ಅಡಿಯಲ್ಲಿ 10.5 ಲಕ್ಷ ರೈತರನ್ನು ಆ ಪಟ್ಟಿಗೆ ಸೇರಿಸಿದೆ. ಈ ಉದ್ದೇಶಕ್ಕಾಗಿ 675 ಕೋಟಿ ರೂ.ಗಳನ್ನು ಮೀಸಲಿರಿಸಿದೆ. ದೇಶದಲ್ಲಿ ಮೊದಲ ಬಾರಿಗೆ ಕ್ಲೇಮುಗಳನ್ನು ನಿಗದಿತ ಸಮಯದಲ್ಲಿ

ಇತ್ಯರ್ಥಗೊಳಿಸುವುದಕ್ಕಾಗಿ ಬೆಳೆ ಕಟಾವಿನ ಪ್ರಯೋಗಗಳನ್ನು ನಡೆಸಲು ಒಂದು ಹೊಸ ವಿಧಾನದ ಮೊಬೈಲ್ ಆ್ಯಪ್‌ನ್ನು ಅಭಿವೃದ್ಧಿಪಡಿಸಲಾಗಿದೆ. ಮುಂಗಾರು ಬೆಳೆಗೆ, ರೈತರಿಗೆ ವಿಮೆ ಇತ್ಯರ್ಥ ಮತ್ತು ಪಾವತಿ ಮಾಡುವುದು ಪ್ರಾರಂಭಿಸಿದೆ.

11. ನಿರಂತರ ಬರಗಾಲದಿಂದ ತತ್ತರಿಸಿರುವುದರಿಂದ, 2.25 ಲಕ್ಷ ರೈತರಿಗೆ ಅವರು ಪಡೆದ ಕೃಷಿ ಸಾಲದ ಅಸಲು ಮೊತ್ತವನ್ನು 31.03.2017ಕ್ಕಿಂತ ಮುಂಚೆ ಪಾವತಿಸಿದ್ದಲ್ಲಿ, ಬಾಕಿ ಇರುವ ಬಡ್ಡಿಯನ್ನು ನನ್ನ ಸರ್ಕಾರವು ಮನ್ನಾ ಮಾಡಿದೆ. ಕೃಷಿ ಉತ್ಪನ್ನಗಳ ಮೇಲಿನ ಬೆಲೆ ಕುಸಿತದಿಂದ ರೈತರನ್ನು ಕಾಪಾಡಲು ಕೆಲವು ಬೆಳೆಗಳಿಗೆ ಸಂಬಂಧಿಸಿದಂತೆ, ಮಾರುಕಟ್ಟೆ ಮಧ್ಯಪ್ರವೇಶವನ್ನು ಮಾಡಲಾಗಿದೆ. ಅದರಲ್ಲಿ 65.43 ಕೋಟಿ ರೂ.ಗಳ ವೆಚ್ಚದಲ್ಲಿ ಕನಿಷ್ಟ ಬೆಂಬಲ ಬೆಲೆಯಲ್ಲಿ ಈರುಳ್ಳಿ ಸಂಗ್ರಹಣೆ, 155 ಕೋಟಿ ರೂ.ಗಳ ವೆಚ್ಚದಲ್ಲಿ ತೆಂಗು ಬೆಳೆಗಾರರಿಗೆ ಕನಿಷ್ಠ ಬೆಂಬಲ ಬೆಲೆ, ಕನಿಷ್ಠ ಬೆಂಬಲ ಬೆಲೆಯ ಮೇಲೆ ಪ್ರತಿ ಕ್ವಿಂಟಾಲ್ ತೊಗರಿಬೇಳೆಗೆ 450 ರೂ.ಗಳ ಬೋನಸ್ ಮತ್ತು ಪ್ರತಿ ಕ್ವಿಂಟಾಲ್ ಭತ್ತಕ್ಕೆ ಕನಿಷ್ಟ ಬೆಂಬಲ ಬೆಲೆಯ ಮೇಲೆ 100 ರೂ. ಬೋನಸ್‌ನೊಂದಿಗೆ ಸಂಗ್ರಹಣೆ ಮಾಡುವುದು ಸೇರಿದೆ.

12. ಕೃಷಿ ಮಾರುಕಟ್ಟೆ ಕ್ಷೇತ್ರದಲ್ಲಿ ಪಥ ಬದಲಿಸುವ ಸುಧಾರಣೆಯನ್ನು ನನ್ನ ಸರ್ಕಾರವು ಮಾಡಿದೆ. ಈ ಕ್ಷೇತ್ರದಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ ಎಂಬ ಅಭಿನಂದನೆಗೆ ಪಾತ್ರವಾಗಿದೆ. ಕೇಂದ್ರ ಸರ್ಕಾರ ತನ್ನ ರಾಷ್ಟ್ರೀಯ

ಮಾರುಕಟ್ಟೆ ಕಾರ್ಯಕ್ರಮದಲ್ಲಿ ಕರ್ನಾಟಕದ ಪ್ರಯೋಗವನ್ನು ಮಾದರಿಯಾಗಿ ಸ್ವೀಕರಿಸಿದೆ. ಏಕೀಕೃತ ವ್ಯವಸ್ಥೆಯಲ್ಲಿ ಕರ್ನಾಟಕದ 156 ಕೃಷಿ ಉತ್ಪನ್ನ ಮಾರುಕಟ್ಟೆಗಳು ಆನ್‌ಲೈನ್ ವ್ಯವಹಾರ ನಡೆಸುತ್ತಿವೆ. ಈ ವಿನೂತನ ವ್ಯವಸ್ಥೆಯಿಂದಾಗಿ ವ್ಯವಹಾರದಲ್ಲಿ ಪಾರದರ್ಶಕತೆ ಸಾಧ್ಯವಾಗಿದ್ದು, ಆರೋಗ್ಯಕರ ಸ್ಪರ್ಧೆ ಕೂಡಾ ಹೆಚ್ಚಿರುವ ಕಾರಣ ರೈತರು ತಮ್ಮ ಬೆಳೆಗೆ ಉತ್ತಮ ಬೆಲೆ ಪಡೆಯುವಂತಾಗಿದೆ.

13. ತೋಟಗಾರಿಕೆಯು ನನ್ನ ಸರ್ಕಾರದ ಮತ್ತೊಂದು ಆದ್ಯತೆಯ ಕ್ಷೇತ್ರವಾಗಿದೆ. 57 ರೈತ ಉತ್ಪನ್ನಗಳ ಸಂಸ್ಥೆಗಳು ಕಂಪನಿಗಳಾಗಿ ನೋಂದಾಯಿಸಿದೆ. ಪ್ರತಿಯೊಂದು ಕಂಪನಿಗೆ ಕಾರ್ಯೋಪಯುಕ್ತ ಬಂಡವಾಳವಾಗಿ ಗರಿಷ್ಠ 25 ಲಕ್ಷ ರೂ.ಗಳನ್ನು ಮತ್ತು ಮೂಲಭೂತ ಸೌಕರ್ಯವನ್ನು ಒದಗಿಸುವುದಕ್ಕೆ ಗರಿಷ್ಠ 1 ಕೋಟಿ ರೂ.ಗಳ ಸಹಾಯಧನ ಒದಗಿಸಲಾಗಿದೆ. ಈ ರೀತಿಯ ಕ್ರಮವು ಸಾಮೂಹಿಕವಾಗಿ ರೈತರನ್ನು ಸಮರ್ಥಗೊಳಿಸುವುದು, ಮಾರುಕಟ್ಟೆಗಳಿಗೆ ನೇರ ಪ್ರವೇಶಿಸುವುದಕ್ಕೆ ಮತ್ತು ಅವರ ವ್ಯಾಪಾರದ ಕೊಡುಕೊಳ್ಳುವಿಕೆಯ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ನೆರವಾಗುತ್ತದೆ. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮದ ಯೋಜನೆಯನ್ನು ಬಳಸಿಕೊಳ್ಳುವ ಮೂಲಕ 7436 ಹೆಕ್ಟೇರ್‌ಗಳಷ್ಟು ಪ್ರದೇಶವನ್ನು ತೋಟಗಾರಿಕಾ ಪ್ರದೇಶವಾಗಿ ವಿಸ್ತರಿಸಲಾಗಿದೆ.

14. ಪಶುಸಂಗೋಪನೆ ಮತ್ತು ಮೀನುಗಾರಿಕೆ ಕ್ಷೇತ್ರಗಳು ರೈತರ ಆದಾಯಕ್ಕೆ ಮತ್ತು ರಾಜ್ಯದ ಆರ್ಥಿಕತೆಗೆ ಮಹತ್ವದ ಕೊಡುಗೆ ನೀಡಿವೆ. ಪ್ರಮುಖವಾದ

ಸಾಂಕ್ರಾಮಿಕ ರೋಗಗಳು ಹಠಾತ್ ಆಗಿ ಹರಡುವುದನ್ನು ತಡೆಯಲು ಪ್ರಸಕ್ತ ಸಾಲಿನಲ್ಲಿ 645 ಲಕ್ಷ ಔಷಧ ಲಸಿಕೆಗಳನ್ನು ಹಾಕಲಾಗಿದೆ. 3.62 ಲಕ್ಷ ಕುಟುಂಬಗಳು ವಿಮಾ ಕಂತಿನ ಮೇಲೆ ಶೇಕಡಾ 70 ರಷ್ಟು ಸಹಾಯ ಧನದೊಂದಿಗೆ ಪಶು ವಿಮಾ ಸೌಲಭ್ಯಗಳನ್ನು ಪಡೆದಿವೆ. 200ಕ್ಕೂ ಹೆಚ್ಚಿನ ಕುರಿಗಾಹಿ ಸಹಕಾರ ಸಂಘಗಳಿಗೆ ತಲಾ 5 ಲಕ್ಷ ರೂ.ಗಳ ನೆರವನ್ನು ಒದಗಿಸಲಾಗಿದೆ. ಅನಿರೀಕ್ಷಿತವಾಗಿ ಸಾವಿಗೀಡಾದ ಕುರಿ ಮತ್ತು ಮೇಕೆಗಳ ಮಾಲೀಕರಿಗೆ 10 ಕೋಟಿ ರೂ.ಗಳನ್ನು ಪರಿಹಾರದ ರೂಪದಲ್ಲಿ ವಿತರಿಸಲಾಗಿದೆ. 8.61 ಲಕ್ಷ ಹಾಲು ಉತ್ಪಾದಕರಿಗೆ ಪ್ರಯೋಜನವಾಗಲು ಪ್ರಸಕ್ತ ಸಾಲಿನಲ್ಲಿ ಪ್ರತಿ ಲೀಟರ್‌ಗೆ 4 ರೂ.ಗಳಿಂದ 5 ರೂ.ಗಳವರೆಗೆ ಹಾಲಿನ ಸಹಾಯಧನವನ್ನು ಹೆಚ್ಚಿಸಲಾಗಿದೆ.

15. ಪ್ರಸಕ್ತ ಸಾಲಿನಲ್ಲಿ ಮೀನುಗಾರರನ್ನು ಉತ್ತೇಜಿಸಲು, 3451 ದೋಣಿ ಮಾಲೀಕರಿಗೆ ಪ್ರಯೋಜನವಾಗುವಂತೆ ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ ಸಹಾಯಧನ ನೀಡಿಕೆಗಾಗಿ 65 ಕೋಟಿ ರೂ.ಗಳಿಗೂ ಹೆಚ್ಚು ಹಣವನ್ನು ಬಿಡುಗಡೆಗೊಳಿಸುವುದು ಒಳಗೊಂಡಂತೆ ಹಲವು ಕ್ರಮಗಳನ್ನು ಕೈಗೊಂಡಿದೆ.

16. ನನ್ನ ಸರ್ಕಾರವು, ರಾಜ್ಯದಲ್ಲಿ ಅದರಲ್ಲೂ ನಿರ್ದಿಷ್ಟವಾಗಿ ಕೃಷ್ಣಾ ಮೇಲ್ದಂಡೆ ಜಲಾನಯನ ಪ್ರದೇಶದಲ್ಲಿ ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಸುವ ಸಲುವಾಗಿ 5 ವರ್ಷಗಳಲ್ಲಿ ನೀರಾವರಿಗಾಗಿ 50,000 ಕೋಟಿ ರೂ.ಗಳನ್ನು ವಿನಿಯೋಗಿಸುವ ಭರವಸೆ ನೀಡಿತ್ತು. ಕಳೆದ 4 ವರ್ಷಗಳಲ್ಲಿ, ಭಾರಿ ಮತ್ತು

ಮಧ್ಯಮ ನೀರಾವರಿ ಯೋಜನೆಗಳಿಗೆ 42,540 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಎತ್ತಿನಹೊಳೆ ಮತ್ತು ಭದ್ರಾ ಮೇಲ್ದಂಡೆ ಯೋಜನೆಗಳ ಅನುಷ್ಠಾನಕ್ಕಾಗಿ "ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ" ಎಂಬ ಹೊಸ ನಿಗಮವನ್ನು ಸ್ಥಾಪಿಸಲಾಗಿದೆ. ವಿಶ್ವ ಬ್ಯಾಂಕಿನ ನೆರವಿನೊಂದಿಗೆ 276 ಕೋಟಿ ರೂ.ಗಳ ವೆಚ್ಚದಲ್ಲಿ ಅಣೆಕಟ್ಟು ಪುನ:ಶ್ಚೇತನ ಮತ್ತು ಅಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ 27 ಭಾರಿ ಮತ್ತು ಮಧ್ಯಮ ನೀರಾವರಿ ಅಣೆಕಟ್ಟುಗಳನ್ನು ಪುನ:ಶ್ಚೇತನಗೊಳಿಸಲಾಗಿದೆ. ಕೇಂದ್ರ ಜಲ ಆಯೋಗವು ಆಲಮಟ್ಟಿ ಮತ್ತು ನಾರಾಯಣಪುರ ಅಣೆಕಟ್ಟುಗಳ ಪುನ:ಶ್ಚೇತನ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗಾಗಿ ರಾಜ್ಯಕ್ಕೆ "ಅತ್ಯುತ್ತಮ ನಿರ್ವಹಣೆಯ ಗೌರವ ಪ್ರಶಸ್ತಿ" ಯನ್ನು ಪ್ರಧಾನ ಮಾಡಿದೆ ಎಂಬ ವಿಷಯವನ್ನು ಈ ಘನತೆವೆತ್ತ ಸದನಕ್ಕೆ ತಿಳಿಸಲು ನಾನು ಹರ್ಷಿಸುತ್ತೇನೆ.

17. ಸುಮಾರು 8 ಕೋಟಿ ಸಸಿಗಳನ್ನು ನೆಡುವುದರ ಜೊತೆಗೆ ನನ್ನ ಸರ್ಕಾರವು, ಸೂಕ್ಷ್ಮ ಅರಣ್ಯ ಪ್ರದೇಶಗಳಲ್ಲಿ ಮತ್ತು ಆ ಪ್ರದೇಶಕ್ಕೆ ಹತ್ತಿರದಲ್ಲಿ ವಾಸ ಮಾಡುವ ಕುಟುಂಬಗಳಿಗೆ ಅನುಕೂಲವಾಗುವಂತೆ ಉಚಿತ ಎಲ್‌ಪಿಜಿ ಸಂಪರ್ಕಗಳನ್ನು ಕಲ್ಪಿಸಿದೆ. ವನ್ಯಜೀವಿಗಳಿಂದ ಬೆಳೆಗಳಿಗೆ ಉಂಟಾಗಿರುವ ಹಾನಿಗಾಗಿ ಮತ್ತು ಜನರಿಗೆ ಉಂಟಾಗಿರುವ ಶಾಶ್ವತವಾದ ಮತ್ತು ಭಾಗಶ: ಅಂಗವಿಕಲತೆಗಾಗಿ ನೀಡುವ ನಷ್ಟ ಪರಿಹಾರದ ಪ್ರಮಾಣವನ್ನು ನನ್ನ ಸರ್ಕಾರವು ದುಪ್ಪಟ್ಟುಗೊಳಿಸಿದೆ. ಬೆಂಗಳೂರಿನಲ್ಲಿ ಇರುವ ಮಡಿವಾಳ,

ಹೆಣ್ಣೂರು ಮತ್ತು ಪುಟ್ಟೇನಹಳ್ಳಿ ಕೆರೆಗಳ ಸಮಗ್ರವಾದ ಅಭಿವೃದ್ಧಿಯನ್ನು ಕೈಗೊಳ್ಳಲಾಗಿದೆ.

18. ನನ್ನ ಸರ್ಕಾರವು, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ನಿರಂತರವಾಗಿ ಶ್ರಮಿಸುತ್ತಿದೆ. ಪ್ರಸಕ್ತ ಸಾಲಿನಲ್ಲಿ ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ಕಾರ್ಯಕ್ರಮಗಳಿಗೆ 19,543 ಕೋಟಿ ರೂ.ಗಳನ್ನು ಒದಗಿಸಿದ್ದೇವೆ. ಡಾ. ಬಿ.ಆರ್. ಅಂಬೇಡ್ಕರ್‌ರವರ 125ನೇ ಜನ್ಮ ದಿನಾಚರಣೆಯ ಅಂಗವಾಗಿ, 125 ಹೊಸ ವಸತಿ ಶಾಲೆಗಳು ಹಾಗೂ 100 ಹೊಸ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ಸಹ ಮಂಜೂರು ಮಾಡಿದೆ. ನನ್ನ ಸರ್ಕಾರವು, ಡಾ.ಬಿ.ಆರ್. ಅಂಬೇಡ್ಕರ್‌ರವರ 125ನೇ ಜನ್ಮ ದಿನಾಚರಣೆಯನ್ನು ಜಾಗತಿಕ ಸಮ್ಮೇಳನದೊಂದಿಗೆ “ಜ್ಞಾನ ದರ್ಶನ ದಿನ”ವನ್ನಾಗಿ ಆಚರಿಸಲು ಉದ್ದೇಶಿಸಿದೆ.

19. ಹೊಸದಾಗಿ ರಚಿಸಿದ ಭೋವಿ ಮತ್ತು ತಾಂಡಾ ಅಭಿವೃದ್ಧಿ ನಿಗಮಗಳೂ ಸೇರಿದಂತೆ, ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ರಚಿಸಿರುವ ಅಭಿವೃದ್ಧಿ ನಿಗಮಗಳ ಮೂಲಕ 30,000 ಫಲಾನುಭವಿಗಳಿಗೆ ನೆರವನ್ನು ನೀಡುವುದಕ್ಕಾಗಿ 1475 ಕೋಟಿ ರೂ.ಗಳನ್ನು ಒದಗಿಸಲಾಗಿದೆ. ಡಾ. ಬಿ.ಆರ್.ಅಂಬೇಡ್ಕರ್ ಆವಾಸ್ ಯೋಜನೆ ಅಡಿಯಲ್ಲಿ ವಸತಿ ರಹಿತ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕುಟುಂಬಗಳಿಗೆ 2.5 ಲಕ್ಷ ಮನೆಗಳನ್ನು ನಿರ್ಮಿಸಲಾಗಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ

ಕಾಲೋನಿಗಳಿಗೆ ರಸ್ತೆ ಮತ್ತು ಒಳಚರಂಡಿ ಮುಂತಾದ ಮೂಲಸೌಕರ್ಯ ಸೌಲಭ್ಯಗಳನ್ನು ಒದಗಿಸುವುದಕ್ಕಾಗಿ 1000 ಕೋಟಿ ರೂ.ಗಳಿಗೂ ಹೆಚ್ಚು ಹಣವನ್ನು ಖರ್ಚು ಮಾಡಲಾಗಿದೆ. ಅರಣ್ಯ ಹಕ್ಕುಗಳ ಅಧಿನಿಯಮದ ಅಡಿಯಲ್ಲಿ 12,722 ಅನುಸೂಚಿತ ಬುಡಕಟ್ಟು ಅರಣ್ಯ ವಾಸಿಗಳಿಗೆ ಸ್ವಾಧೀನ ಹಕ್ಕುಗಳನ್ನು ಮಂಜೂರು ಮಾಡಲಾಗಿದೆ.

20. ಹಿಂದುಳಿದ ವರ್ಗಗಳಿಂದ ಬಂದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವುದಕ್ಕಾಗಿ, 12 ಲಕ್ಷ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನವನ್ನು ಮತ್ತು 4.5 ಲಕ್ಷ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನವನ್ನು ನೀಡಲಾಗಿದೆ. 10.6 ಲಕ್ಷ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಮಾಡಲು ನೆರವು ನೀಡಲಾಗಿದೆ.

21. ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಅಭಿವೃದ್ಧಿಯು ನನ್ನ ಸರ್ಕಾರದ ಕಾರ್ಯಸೂಚಿಯ ಪ್ರಮುಖ ಅಂಶವಾಗಿದೆ. ನನ್ನ ಸರ್ಕಾರವು, 13 ಲಕ್ಷ ಅಲ್ಪ ಸಂಖ್ಯಾತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನವನ್ನು, 10,000 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಸತಿನಿಲಯಗಳನ್ನು, 4 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮತ್ತು 8 ಮೊರಾರ್ಜಿ ದೇಸಾಯಿ ಪದವಿಪೂರ್ವ ಕಾಲೇಜುಗಳನ್ನು ಮಂಜೂರು ಮಾಡಿದೆ. ಹಜ್ ಯಾತ್ರಿಕರಿಗಾಗಿ ಬೆಂಗಳೂರಿನಲ್ಲಿ ನೂತನ ಹಜ್ ಭವನವನ್ನು ಪ್ರಾರಂಭಿಸಿದೆ. ವಕ್ಫ್ ಸ್ವತ್ತುಗಳ ಸಮಗ್ರ ಗಣಕೀಕರಣ ಮತ್ತು ಎರಡನೆಯ ಸಮೀಕ್ಷೆಯೂ ಪ್ರಗತಿಯಲ್ಲಿದೆ.

22. ಮಹಿಳಾ ಮತ್ತು ಮಕ್ಕಳ ಕಲ್ಯಾಣವು ನನ್ನ ಸರ್ಕಾರದ ಪ್ರಮುಖ ಆದ್ಯತೆಯಾಗಿದೆ. ಮಗುವಿನ ಬಾಲ್ಯ ಪೂರ್ವದ ಪಾಲನೆ ಮಾಡಲು ಮತ್ತು ಮಗುವಿಗೆ ಶಿಕ್ಷಣವನ್ನು ನೀಡಲು ನನ್ನ ಸರ್ಕಾರವು, ಪ್ರಸಕ್ತ ಸಾಲಿನಲ್ಲಿ 1400 ಹೊಸ ಅಂಗನವಾಡಿಗಳನ್ನು ಪ್ರಾರಂಭಿಸಿದೆ. ಇದರಿಂದ ರಾಜ್ಯದ ಅಂಗನವಾಡಿಗಳ ಸಂಖ್ಯೆ 66,000 ಕ್ಕೆ ಏರಿದೆ. ಪ್ರಸಕ್ತ ಸಾಲಿನಲ್ಲಿ 11,500 ಅಂಗನವಾಡಿ ಶೌಚಾಲಯಗಳ ನಿರ್ಮಾಣಕ್ಕೆ ವಿಶೇಷ ಕ್ರಮ ಕೈಗೊಳ್ಳಲಾಗಿದೆ. "ಕ್ಷೀರ ಭಾಗ್ಯ" ಯೋಜನೆ ಅಡಿಯಲ್ಲಿ 6 ತಿಂಗಳಿಂದ 6 ವರ್ಷಗಳ ನಡುವಿನ 38 ಲಕ್ಷಕ್ಕಿಂತಲೂ ಹೆಚ್ಚು ಮಕ್ಕಳಿಗೆ ಒಂದು ವಾರದಲ್ಲಿ 3 ಸಲ 150 ಮಿಲಿ ಲೀಟರ್ ಕೆನೆಭರಿತ ಹಾಲನ್ನು ನೀಡಲಾಗುತ್ತಿದೆ. ನನ್ನ ಸರ್ಕಾರವು, ಅಪೌಷ್ಟಿಕತೆಯನ್ನು ಹೋಗಲಾಡಿಸಲು, ವರ್ಷದಲ್ಲಿ 300 ದಿನಗಳ ಕಾಲ ಬಡ ಗರ್ಭಿಣಿ ಮಹಿಳೆಯರು ಮತ್ತು ಬಾಣಂತಿಯರಿಗೆ ಸಿದ್ಧಪಡಿಸಿದ ಬಿಸಿಯೂಟ ನೀಡುವುದಕ್ಕೆ "ಮಾತೃ ಪೂರ್ಣ" ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಿದೆ. ಇದರಿಂದ ತಾಯಿ ಮತ್ತು ಮಕ್ಕಳ ಪೌಷ್ಟಿಕತೆಯ ಮಟ್ಟ ಮತ್ತು ಆರೋಗ್ಯವು ಸುಧಾರಣೆಯಾಗಲಿದೆ.

23. ಮಹಿಳಾ ಸಮಖ್ಯಾ ಯೋಜನೆಗೆ ಕೇಂದ್ರದ ಅನುದಾನವನ್ನು ನಿಲ್ಲಿಸಿದ ನಂತರವೂ ನನ್ನ ಸರ್ಕಾರವು, ಹೆಣ್ಣು ಮಕ್ಕಳ ಮತ್ತು ಮಹಿಳೆಯರ ಸಬಲೀಕರಣಕ್ಕಾಗಿ ಸದರಿ ಕಾರ್ಯಕ್ರಮಕ್ಕೆ ನೆರವು ನೀಡಿದೆ. ಅಲ್ಲದೇ ಸ್ವ-ಸಹಾಯ ಗುಂಪುಗಳ 30 ಸ್ತ್ರೀ ಶಕ್ತಿ ಜಿಲ್ಲಾ ಸಂಘಗಳನ್ನು ಸ್ಥಾಪಿಸಲು ನೆರವು ನೀಡಿದೆ.

24. ನನ್ನ ಸರ್ಕಾರವು, ವಿಕಲಚೇತನ ವ್ಯಕ್ತಿಗಳನ್ನು ಸಬಲೀಕರಣಗೊಳಿಸುವ ಕಾರ್ಯದಲ್ಲಿ ಅತ್ಯುತ್ತಮ ರಾಜ್ಯ ಎಂಬ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿದೆ ಎಂದು ತಿಳಿಸಲು ಹರ್ಷವೆನಿಸುತ್ತಿದೆ. ವಿಕಲಚೇತನ ವ್ಯಕ್ತಿಗಳಿಗೆ ವೈಯಕ್ತಿಕ ನೆರವುಗಳು ಮತ್ತು ಸಾಧನ ಸಾಮಗ್ರಿಗಳಿಗಾಗಿ 10,000 ರೂ.ಗಳಿಂದ 15,000 ರೂ.ಗಳವರೆಗೆ ಅನುದಾನವನ್ನು ಹೆಚ್ಚಿಸಿರುವುದು ಮಾತ್ರವಲ್ಲದೆ, ಜಿಲ್ಲಾ ವಿಕಲಚೇತನರ ಪುನರ್ವಸತಿ ಕೇಂದ್ರಕ್ಕೆ 28 ಲಕ್ಷ ರೂ.ಗಳಿಂದ 36 ಲಕ್ಷ ರೂ.ಗಳವರೆಗೆ ವಾರ್ಷಿಕ ಅನುದಾನವನ್ನು ಸಹ ಮಂಜೂರು ಮಾಡಿದೆ. ನನ್ನ ಸರ್ಕಾರವು, ಪೋಷಕರು ಮತ್ತು ಹಿರಿಯ ನಾಗರಿಕರ ಪೋಷಣೆ ಮತ್ತು ಕಲ್ಯಾಣ ಅಧಿನಿಯಮ, 2007 ನ್ನು ಅನುಷ್ಠಾನಗೊಳಿಸುವಲ್ಲಿ ಅತ್ಯುತ್ತಮ ರಾಜ್ಯ ಎಂದು ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿರುವುದು ಹೆಮ್ಮೆಯ ವಿಷಯವಾಗಿದೆ.

25. ನನ್ನ ಸರ್ಕಾರವು, "ಪ್ರತಿಯೊಂದು ಮಗುವು ಶಾಲೆಗೆ ಹೋಗಬೇಕು ಹಾಗೂ ಚೆನ್ನಾಗಿ ಕಲಿಯಬೇಕು" ಎಂಬ ಧ್ಯೇಯ ಹೊಂದಿದ್ದು, ರಾಜ್ಯ ನೀತಿ ನಿರ್ದೇಶಕ ತತ್ವಗಳ ಅಡಿಯಲ್ಲಿ ಶಿಕ್ಷಣವು ಸಂವಿಧಾನ ನಮಗೆ ನೀಡಿದ ಹಕ್ಕು ಎಂಬುದನ್ನು ಜನರಿಗೆ ಮನವರಿಕೆ ಮಾಡಿ ಕೊಡುವ ನಿಟ್ಟಿನಲ್ಲಿ ಶ್ರಮಿಸುತ್ತಿದೆ. ಇದರ ಫಲಶ್ರುತಿಗಾಗಿ ನನ್ನ ಸರ್ಕಾರವು, 62.59 ಲಕ್ಷ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳನ್ನು, 47.45 ಲಕ್ಷ ವಿದ್ಯಾರ್ಥಿಗಳಿಗೆ ಉಚಿತ ಸಮವಸ್ತ್ರಗಳನ್ನು, 8ನೇ ತರಗತಿಯ 4.92 ಲಕ್ಷ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್‌ಗಳನ್ನು ನೀಡಿದೆ ಹಾಗೂ ಪ್ರಸಕ್ತ ಸಾಲಿನಲ್ಲಿ 61.5 ಲಕ್ಷ

ವಿದ್ಯಾರ್ಥಿಗಳಿಗೆ ಹಾಲಿನೊಂದಿಗೆ ಮಧ್ಯಾಹ್ನದ ಬಿಸಿಯೂಟದ ಜೊತೆಗೆ ಪುಷ್ಟಿದಾಯಕ ಅನ್ನವನ್ನು ಪೂರೈಸುತ್ತಿದೆ. ನನ್ನ ಸರ್ಕಾರವು, ಶಾಲೆಗಳಲ್ಲಿ ಮಕ್ಕಳ ಕಲಿಕೆಯ ಫಲಶೃತಿಗಳನ್ನು ಸುಧಾರಿಸಿಕೊಳ್ಳುವುದಕ್ಕೆ ಬದ್ಧವಾಗಿದ್ದು, ಇದನ್ನು ಸಾಧಿಸಲು ಸರ್ಕಾರ ಈ ವರ್ಷದ ಅವಧಿಯಲ್ಲಿ ಹಲವಾರು ಉಪಕ್ರಮಗಳನ್ನು ಪ್ರಾರಂಭಿಸಿದೆ. ಇವುಗಳಲ್ಲಿ 2 ಜಿಲ್ಲೆಗಳಲ್ಲಿ "ವಿದ್ಯಾರ್ಥಿಗಳ ಉತ್ತೇಜಕ ಕಾರ್ಯಕ್ರಮ", 12 ಜಿಲ್ಲೆಗಳಲ್ಲಿ "ಗಣಿತ ಕಲಿಕಾ ಕಾರ್ಯಕ್ರಮ", ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ICT ಯನ್ನು ತರಲು "ತಂತ್ರಜ್ಞಾನ ನೆರವಿನ ಕಲಿಕಾ ಕಾರ್ಯಕ್ರಮ", 3 ಜಿಲ್ಲೆಗಳಲ್ಲಿ ಸಾಕ್ಷರತೆ ಹಾಗೂ ಗಣಿತದ ಮೂಲ ಸೂತ್ರಗಳಿಗಾಗಿ ಪೂರಕ ಬೋಧನೆಯ ಕಾರ್ಯಕ್ರಮಗಳೂ ಸಹ ಒಳಗೊಂಡಿವೆ. ಈ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಹೆಸರಾಂತ ನಾಗರಿಕ ಸಮಾಜ ಸಂಸ್ಥೆಗಳು ಸಹಭಾಗಿತ್ವ ನೀಡಿವೆ. "ಶಿಕ್ಷಣ ಕಿರಣ" ಎಂಬ ಪತ್ತೆ ವ್ಯವಸ್ಥೆಯ ಮೂಲಕ ಕಡಿಮೆ ಕಲಿಕಾ ಸಾಮರ್ಥ್ಯದ ವಿದ್ಯಾರ್ಥಿಗಳನ್ನು ಗುರುತಿಸಲಾಗುತ್ತಿದ್ದು, ಈ ವಿದ್ಯಾರ್ಥಿಗಳ ಯುಕ್ತ ಸಾಮರ್ಥ್ಯ ವರ್ಧನೆಗಾಗಿ ದೀರ್ಘ ರಜಾಕಾಲದಲ್ಲಿ ಅವರಿಗೆ ಪೂರಕ ಬೋಧನೆಯನ್ನು ಸಹ ನೀಡಲಾಗುತ್ತಿದೆ.

26. ಕಳೆದ 3 ವರ್ಷಗಳ ಅವಧಿಯಲ್ಲಿ, ಬಡಕುಟುಂಬಗಳಿಂದ ಬಂದಿರುವ 4.5 ಲಕ್ಷ ಮಕ್ಕಳನ್ನು 'ಶಿಕ್ಷಣದ ಹಕ್ಕು ಅಧಿನಿಯಮ'ದ ಅಡಿಯಲ್ಲಿ ಖಾಸಗಿ ಅನುದಾನರಹಿತ ಶಾಲೆಗಳಿಗೆ ಸೇರಿಸಲಾಗಿದೆ ಮತ್ತು ಸರ್ಕಾರವು ಇವರ ಶಿಕ್ಷಣಕ್ಕಾಗಿ ಶುಲ್ಕವನ್ನು ಭರಿಸಿದೆ.

27. ಕರ್ನಾಟಕ ರಾಜ್ಯವು, ಉನ್ನತ ಶಿಕ್ಷಣ ನೀಡಿಕೆಯಲ್ಲಿ ಶೇಕಡಾ 26.6 ರಷ್ಟು ಒಟ್ಟು ದಾಖಲಾತಿ ಪ್ರಮಾಣ ಹೊಂದಿದ್ದು, ಅತೀ ಹೆಚ್ಚಿನ ಸಾಧನೆ ಮಾಡಿರುವ ರಾಜ್ಯಗಳಲ್ಲಿ ಒಂದಾಗಿದೆ. ಪ್ರಸಕ್ತ ಸಾಲಿನಲ್ಲಿ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಕಲಿಕಾ ಗುಣಮಟ್ಟವನ್ನು ಹೆಚ್ಚಿಸಿಕೊಳ್ಳಲು ನನ್ನ ಸರ್ಕಾರದ ಪ್ರೋತ್ಸಾಹದಾಯಕ ಕ್ರಮಗಳಿಂದಾಗಿ 71 ಕಾಲೇಜುಗಳು NAAC ಮನ್ನಣೆಗೆ ಪಾತ್ರವಾಗಿವೆ. ನನ್ನ ಸರ್ಕಾರವು, ಲಂಡನ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ ಸಹಯೋಗದೊಂದಿಗೆ ಬೆಂಗಳೂರಿನಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್‌ನ್ನು ಪ್ರಾರಂಭಿಸುವುದಕ್ಕಾಗಿ ಸಕ್ರಿಯಾತ್ಮಕ ಕ್ರಮಗಳನ್ನು ಕೈಗೊಂಡಿರುತ್ತದೆ. ನನ್ನ ಸರ್ಕಾರವು, ಶಿಕ್ಷಕರಿಗೆ ಜಾಗತಿಕ ಮಾನದಂಡಗಳಿಗನುಸಾರವಾಗಿ ತರಬೇತಿಯನ್ನು ನೀಡುವುದಕ್ಕಾಗಿ ಮೂಲಭೂತ ಸೌಕರ್ಯದೊಂದಿಗೆ ಉನ್ನತ ಶಿಕ್ಷಣ ಅಕಾಡೆಮಿ ಯನ್ನು ಬಲಪಡಿಸಿದೆ. ಕರ್ನಾಟಕವನ್ನು ಸಂಶೋಧನೆ, ನಾವಿನ್ಯತೆ ಮತ್ತು ಜ್ಞಾನವನ್ನು ಹೊಂದಿರುವ ಕೇಂದ್ರವನ್ನಾಗಿ ಮಾಡುವ ದೃಷ್ಟಿಯಿಂದ ಒಂದು ಸಮಗ್ರ ಶಿಕ್ಷಣ ನೀತಿಯನ್ನು ಸಹ ಜಾರಿಗೊಳಿಸಿದೆ.

28. ನನ್ನ ಸರ್ಕಾರವು, ಪ್ರಾಥಮಿಕ ಆರೋಗ್ಯ ಪಾಲನೆಯನ್ನು ಬಲಪಡಿಸಲು ಹೆಚ್ಚು ಆದ್ಯತೆ ನೀಡಿದೆ. ಶಿಶು ಮರಣ ಪ್ರಮಾಣ, ಬಾಣಂತಿಯರ ಮರಣ ಪ್ರಮಾಣವನ್ನು ಕಡಿಮೆ ಮಾಡುವುದಕ್ಕೆ ಮತ್ತು ಸಾಂಸ್ಥಿಕ ಹೆರಿಗೆಗಳನ್ನು ಹೆಚ್ಚಿಸುವುದಕ್ಕೆ ನಾವು ಬದ್ಧರಾಗಿದ್ದೇವೆ. ಈ ವರ್ಷದ ಅಂತ್ಯದಲ್ಲಿ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದೂ ಸೇರಿದಂತೆ ಎಲ್ಲಾ ತಾಲ್ಲೂಕು ಮತ್ತು

ಜಿಲ್ಲಾ ಆಸ್ಪತ್ರೆಗಳಲ್ಲಿ ಜೆನರಿಕ್ ಔಷಧಾಲಯಗಳನ್ನು ತೆರೆಯುವುದು ಮತ್ತು ಕಡ್ಡಾಯ ಆಂಬ್ಯುಲೆನ್ಸ್ ಸೇವೆಗಳನ್ನು ಒದಗಿಸುವುದಕ್ಕೆ ಹೆಚ್ಚು ಒತ್ತು ನೀಡಲಿದೆ. ರಾಜ್ಯ ಸರ್ಕಾರವು, ತಾಲ್ಲೂಕು ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಘಟಕಗಳನ್ನು ಮತ್ತು ಎಲ್ಲಾ ಜಿಲ್ಲಾ ಆಸ್ಪತ್ರೆಗಳಲ್ಲಿ ರಕ್ತ ಘಟಕದ ಪ್ರತ್ಯೇಕ ಸೌಲಭ್ಯಗಳೊಂದಿಗೆ ತೀವ್ರ ನಿಗಾ ಘಟಕಗಳನ್ನು ಪ್ರಾರಂಭಿಸಿದೆ.

29. ಆತ್ಮಹತ್ಯೆ ಮಾಡಿಕೊಂಡ ರೈತರನ್ನು ಅವಲಂಬಿಸಿರುವ ಕುಟುಂಬದ ಸದಸ್ಯರಿಗೆ ನೆರವು ನೀಡುವುದಕ್ಕಾಗಿ ಸುವರ್ಣ ಆರೋಗ್ಯ ಟ್ರಸ್ಟ್ ಅಡಿ "ಇಂದಿರಾ ಸುರಕ್ಷಾ" ಯೋಜನೆಯನ್ನು ಪ್ರಾರಂಭಿಸಿದೆ. ತೀವ್ರತರ ಪ್ರಮಾಣದ ಶ್ರವಣ ದೋಷವುಳ್ಳ ಮಕ್ಕಳಿಗೆ ಉಚಿತ ಚಿಕಿತ್ಸೆಯನ್ನು ನೀಡುವುದಕ್ಕಾಗಿ ಆಧುನಿಕ ಶ್ರವಣ ಸಾಧನ ಅಳವಡಿಕೆ ಯೋಜನೆಯನ್ನು ಜಾರಿಗೆ ತರಲಾಗಿದೆ. ದೇಶದಲ್ಲಿ ಇದೇ ಪ್ರಪ್ರಥಮವಾಗಿ ಅಪಘಾತಕ್ಕೊಳಗಾದವರಿಗೆ ಸೂಕ್ತ ಸಮಯದಲ್ಲಿ ನೆರವನ್ನು ನೀಡುವುದಕ್ಕೆ ಮತ್ತು ಸಕಾಲದಲ್ಲಿ ಗಾಯಾಳುಗಳಿಗೆ ಸಹಾಯ ಮಾಡುವಂಥವರಿಗೆ ಯಾವುದೇ ರೀತಿಯಲ್ಲಿ ಕಿರುಕುಳ ನೀಡಬಾರದು ಎನ್ನುವುದನ್ನು ಖಚಿತಪಡಿಸುವುದಕ್ಕೆ ಸಂಬಂಧಿಸಿದಂತೆ "ಉತ್ತಮ ಪರೋಪಕಾರಿ ಅಧಿನಿಯಮ" ವನ್ನು ಜಾರಿಗೊಳಿಸಲಾಗಿದೆ. ರೋಗಿಗಳಿಗೆ ಮತ್ತು ಆಸ್ಪತ್ರೆಯ ಸಿಬ್ಬಂದಿಗೆ ಸೂಕ್ತವಾದ ದರಗಳಲ್ಲಿ ಆಹಾರವನ್ನು ಒದಗಿಸುವುದಕ್ಕೆ ಜಿಲ್ಲಾ ಮತ್ತು ತಾಲ್ಲೂಕು ಆಸ್ಪತ್ರೆಗಳಲ್ಲಿ ಕ್ಯಾಂಟೀನುಗಳನ್ನು ಸ್ಥಾಪಿಸಲಾಗುತ್ತಿದೆ.

30. ಕಲಬುರ್ಗಿ, ಗದಗ, ಕೊಪ್ಪಳ, ಕಾರವಾರ, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ನೂತನ ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸಿರುವುದರ ಪರಿಣಾಮವಾಗಿ, ರಾಜ್ಯದಲ್ಲಿ ಹೆಚ್ಚುವರಿ 900 ಎಂಬಿಬಿಎಸ್ ಸೀಟುಗಳು ಸೃಜನೆಯಾಗಿವೆ. ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿ 4 ಹೊಸ ಶಸ್ತ್ರಚಿಕಿತ್ಸಾ ವಿಭಾಗಗಳನ್ನು ಮತ್ತು 198 ಹೆಚ್ಚುವರಿ ಹಾಸಿಗೆಗಳ ಸೌಲಭ್ಯದ ವಿಭಾಗಗಳನ್ನು ಪ್ರಾರಂಭಿಸಿದೆ.

31. ಕಳೆದ 3 ವರ್ಷಗಳಲ್ಲಿ, ಸರ್ಕಾರಿ ಬೋಧನೆ ಮತ್ತು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ಹೆಚ್ಚುವರಿ 2708 ಹಾಸಿಗೆಗಳ ಸೌಲಭ್ಯವನ್ನು ಒದಗಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಮೈಸೂರಿನಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ಘಟಕವನ್ನು ಕಾರ್ಯಾರಂಭ ಮಾಡಲಾಗುವುದು. ರೇಡಿಯಾ ವೇಗೋತ್ಕರ್ಷಣಾ ಸಲಕರಣೆಗಳು ಮತ್ತು ರೋಬೋಟಿಕ್ ಸಲಕರಣೆಗಳನ್ನು ಸ್ಥಾಪಿಸುವುದೂ ಸೇರಿದಂತೆ ಬೆಂಗಳೂರಿನ ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯನ್ನು ಮೇಲ್ದರ್ಜೆಗೇರಿಸುವುದನ್ನು ಪೂರ್ಣಗೊಳಿಸಲಾಗುವುದು.

32. ಪಂಚಾಯತ್ ರಾಜ್ ಸಂಸ್ಥೆಗಳನ್ನು ಮತ್ತಷ್ಟು ಬಲಯುತಗೊಳಿಸುವ ಪರಿಣಾಮಕಾರಿ ಕಾನೂನನ್ನು ನನ್ನ ಸರ್ಕಾರವು ಜಾರಿಗೆ ತಂದಿದೆ. ಈ ಕಾನೂನನ್ನು ಅನುಷ್ಠಾನಕ್ಕೆ ತರಲು ಅಗತ್ಯವಿರುವ ನಿಯಮಗಳನ್ನು ರೂಪಿಸಲು ಕ್ರಮ ಕೈಗೊಳ್ಳಲಾಗಿದ್ದು, ರೂಪಿಸಬೇಕಾದ 60 ನಿಯಮಗಳ ಪೈಕಿ 30 ನಿಯಮಗಳ ಅಧಿಸೂಚನೆಯನ್ನು ಹೊರಡಿಸಲಾಗಿದೆ.

33. ಪಹಣಿಯಂತಹ ಪ್ರಮುಖ ಭೂದಾಖಲೆ, ನಿರಾಕ್ಷೇಪಣ ಪತ್ರಗಳು, ಪರವಾನಗಿ ಮತ್ತು ತೆರಿಗೆ ನಿರ್ಧರಣ ಪಟ್ಟಿಗಳು ಇತ್ಯಾದಿ 100 ಬಗೆಯ ಸೇವೆಗಳನ್ನು ಒದಗಿಸುವ ಬಾಪೂಜಿ ಸೇವಾ ಕೇಂದ್ರಗಳನ್ನು ಗ್ರಾಮ ಪಂಚಾಯತ್ ಕಛೇರಿಯಲ್ಲಿಯೇ ಸ್ಥಾಪಿಸಿ ಜನಸ್ನೇಹಿ ಆಡಳಿತಕ್ಕೆ ಕರೆ ನೀಡಿದೆ.

34. ಗ್ರಾಮೀಣ ಪ್ರದೇಶಗಳಲ್ಲಿ ವಿಕೇಂದ್ರೀಕೃತ ಯೋಜನಾ ತಯಾರಿಕೆ ಪ್ರಕ್ರಿಯೆಯನ್ನು ಬಲಪಡಿಸುವ ದೃಷ್ಟಿಯಿಂದ ನನ್ನ ಸರ್ಕಾರವು, "ನಮ್ಮ ಗ್ರಾಮ ನಮ್ಮ ಯೋಜನೆ" ಜಾರಿಗೆ ತಂದಿದ್ದು, ಪ್ರಸಕ್ತ ವರ್ಷದಲ್ಲಿ, ಈವರೆಗೆ ರಾಜ್ಯದ 6022 ಗ್ರಾಮ ಪಂಚಾಯತಿಗಳ ಪೈಕಿ 5971 ಗ್ರಾಮ ಪಂಚಾಯತಿಗಳಲ್ಲಿ ಯೋಜನಾ ಪ್ರಕ್ರಿಯೆಯನ್ನು ಸಮುದಾಯ ಸಹಭಾಗಿತ್ವದ ಮೂಲಕ ಪೂರ್ಣಗೊಳಿಸಲಾಗಿರುತ್ತದೆ. ವಾರ್ಡ್ ಸಭೆಗಳು ಮತ್ತು ಗ್ರಾಮ ಸಭೆಗಳ ಮೂಲಕ ಮುಂದಿನ 5 ವರ್ಷಗಳ ದೂರದೃಷ್ಟಿ ಯೋಜನೆಯಡಿ ಸುಮಾರು 21 ಲಕ್ಷ ಚಟುವಟಿಕೆಗಳನ್ನು ಗುರುತಿಸಲಾಗಿದ್ದು, ಇವುಗಳನ್ನು ಅನುಷ್ಠಾನಗೊಳಿಸಲು ಸರ್ಕಾರವು ಪ್ರಾಮಾಣಿಕ ಪ್ರಯತ್ನ ಮಾಡುತ್ತದೆ.

35. ಶುದ್ಧ ಕುಡಿಯುವ ನೀರನ್ನು ಒದಗಿಸಲು 2016ರ ಅಂತ್ಯದಲ್ಲಿ ಸುಮಾರು 8500 ಶುದ್ಧ ಕುಡಿಯುವ ನೀರಿನ ಘಟಕಗಳು ಕಾರ್ಯಾರಂಭಿಸಿವೆ. ತನ್ಮೂಲಕ ರಾಜ್ಯದ 1 ಕೋಟಿಗೂ ಹೆಚ್ಚು ಗ್ರಾಮೀಣ ಜನತೆಗೆ ಕುಡಿಯುವ ನೀರನ್ನು ಲಭ್ಯಗೊಳಿಸಿದ ಸಾಧನೆ ನಮ್ಮದಾಗಿದೆ. ಮಾರ್ಚ್ 2017ರವರೆಗೆ

ಇನ್ನೂ 1000 ಶುದ್ಧ ಕುಡಿಯುವ ನೀರಿನ ಘಟಕಗಳ ಸ್ಥಾಪನೆ ಮಾಡಲಾಗುವುದು.

36. ವೈಯಕ್ತಿಕ ಶೌಚಾಲಯಗಳ ನಿರ್ಮಾಣ ಕಾರ್ಯದಲ್ಲಿ ಬಹುದೊಡ್ಡ ಕ್ರಾಂತಿಕಾರಕ ಬದಲಾವಣೆಯನ್ನು ನನ್ನ ಸರ್ಕಾರವು ಸಾಧಿಸಿದೆ. 2016ರ ಅಂತ್ಯಕ್ಕೆ ಈ ಸರ್ಕಾರದ ಅವಧಿಯಲ್ಲಿ ಒಟ್ಟು 26 ಲಕ್ಷಕ್ಕೂ ಹೆಚ್ಚು ಶೌಚಾಲಯಗಳನ್ನು ನಿರ್ಮಿಸಿದೆ. ರಾಜ್ಯದ 1035 ಗ್ರಾಮ ಪಂಚಾಯತಿಗಳು, 4954 ಗ್ರಾಮಗಳು, 26 ತಾಲ್ಲೂಕುಗಳು ಹಾಗೂ 5 ಜಿಲ್ಲೆಗಳನ್ನು ಸಂಪೂರ್ಣ ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಲಾಗಿದೆ. ಪ್ರಸ್ತುತ ಹಣಕಾಸು ವರ್ಷದ ಅಂತ್ಯದ ವೇಳೆಗೆ ಇನ್ನೂ 2 ಜಿಲ್ಲೆಗಳನ್ನು 20 ತಾಲ್ಲೂಕುಗಳನ್ನು 500 ಗ್ರಾಮ ಪಂಚಾಯತಿಗಳನ್ನು ಮತ್ತು 3000 ಗ್ರಾಮಗಳನ್ನು ಬಯಲು ಬಹಿರ್ದೆಸೆ ಮುಕ್ತ ಎಂದು ಘೋಷಿಸಲಾಗುವುದು.

37. ನನ್ನ ಸರ್ಕಾರವು, ಗ್ರಾಮೀಣ ಉದ್ಯೋಗ ಸೃಜನೆ ಮಾಡುವಲ್ಲಿ ದಾಪುಗಾಲು ಹಾಕಿದೆ. ಪ್ರಸ್ತುತ ವರ್ಷದ ಗುರಿಯನ್ನು 6 ಕೋಟಿಯಿಂದ 10 ಕೋಟಿ ಮಾನವ ದಿನಗಳಿಗೆ ಹೆಚ್ಚಿಸಲು ಕೇಂದ್ರ ಸರ್ಕಾರದ ಅನುಮೋದನೆ ಪಡೆದುಕೊಂಡಿದೆ. ಕೇಂದ್ರ ಸರ್ಕಾರದಿಂದ ಮಹಾತ್ಮಾಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಹಣ ಬಿಡುಗಡೆ ವಿಳಂಬಗೊಳ್ಳುತ್ತಿರುವುದರಿಂದ ಪ್ರಸ್ತುತ ಸಾಲಿನಲ್ಲಿ 900 ಕೋಟಿ ರೂ.ಗಳನ್ನು ಮಜೂರಿ ಪಾವತಿಗೆ ರಾಜ್ಯ ಸರ್ಕಾರದ ಖಜಾನೆಯಿಂದ ಬಿಡುಗಡೆ ಮಾಡಿದೆ.

38. ನನ್ನ ಸರ್ಕಾರವು, ಶೇ. 50ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆಯನ್ನು ಹೊಂದಿರುವ ಗ್ರಾಮಗಳ ಪೈಕಿ 150 ಗ್ರಾಮಗಳಲ್ಲಿ "ಮುಖ್ಯಮಂತ್ರಿ ಮಾದರಿ ಗ್ರಾಮ ಯೋಜನೆ" ಅಡಿ ಸಮಗ್ರವಾಗಿ ಅಭಿವೃದ್ಧಿಪಡಿಸುವ ಯೋಜನೆಯನ್ನು ಅನುಷ್ಠಾನಗೊಳಿಸುತ್ತದೆ. ನನ್ನ ಸರ್ಕಾರವು, ಮಹತ್ವಾಕಾಂಕ್ಷಿ ಯೋಜನೆಯಾದ "ಗ್ರಾಮ ವಿಕಾಸ" ದಡಿ 939 ಗ್ರಾಮಗಳ ಸರ್ವತೋಮುಖ ಅಭಿವೃದ್ಧಿಗಾಗಿ 750 ಕೋಟಿ ರೂ.ಗಳ ಅನುದಾನ ನಿಗದಿಪಡಿಸಿದ್ದು, ಈವರೆಗೆ 475 ಕೋಟಿ ರೂ.ಗಳನ್ನು ಬಿಡುಗಡೆಗೊಳಿಸಿದೆ.

39. ನನ್ನ ಸರ್ಕಾರವು, ಜನರಿಗೆ ಅಗತ್ಯವಾದ ಸೇವೆಗಳನ್ನು, ಅಂದರೆ ವಿವಿಧ ರೀತಿಯ ಪ್ರಮಾಣ ಪತ್ರಗಳನ್ನು ನೀಡುವುದು, ಪಿಂಚಣಿ ಮಂಜೂರು ಮಾಡುವುದು, ಆರ್.ಟಿ.ಸಿ.ಗಳನ್ನು ನೀಡುವುದು ಮೊದಲಾದವುಗಳನ್ನು ಜನರಿಗೆ ಕೈಗೆಟುಕುವ ರೀತಿಯಲ್ಲಿ ತಲುಪುವಂತೆ ಮಾಡಿದೆ. ಪ್ರಸ್ತುತ ಈ ಸೇವೆಗಳನ್ನು ಗ್ರಾಮ ಪಂಚಾಯತಿಗಳ ಮಟ್ಟದಲ್ಲಿ ಒದಗಿಸಲಾಗುತ್ತಿದೆ. ಧಾರ್ಮಿಕ ದತ್ತಿ ಇಲಾಖೆಯ ಪ್ರಮುಖ ದೇವಾಲಯಗಳಲ್ಲಿ ದೇಣಿಗೆ ನೀಡುವುದು, ಕೊಠಡಿ ಕಾಯ್ದಿರಿಸುವುದು ಮುಂತಾದ ಆನ್‌ಲೈನ್ ಸೇವೆಗಳನ್ನು ಈಗ "ಬೆಂಗಳೂರು ಒನ್" ಮೂಲಕ ನೀಡಲಾಗುತ್ತಿದೆ.

40. ನನ್ನ ಸರ್ಕಾರವು, ಕರ್ನಾಟಕವನ್ನು "ಹಸಿವು ಮುಕ್ತ" ರಾಜ್ಯವನ್ನಾಗಿ ಮಾಡುವುದಕ್ಕೆ ಶ್ರಮಿಸುತ್ತಿದೆ. "ಅನ್ನಭಾಗ್ಯ" ಯೋಜನೆಯು 1 ಕೋಟಿಗೂ

ಹೆಚ್ಚಿನ ಆದ್ಯತಾ ಕುಟುಂಬಗಳನ್ನು ಗುರುತಿಸಿದ್ದು, ಇದು ನಮ್ಮ ಸರ್ಕಾರದ ಗರಿಮೆಯನ್ನು ಹೆಚ್ಚಿಸಿದೆ. ಪ್ರಸಕ್ತ ಸಾಲಿನಲ್ಲಿ, ಕಬ್ಬಿಣಾಂಶಯುಕ್ತ ಉಪ್ಪು ಹಾಗೂ ವಿಟಮಿನ್ ಎ ಮತ್ತು ಡಿ ಯುಕ್ತ ತಾಳೆ ಎಣ್ಣೆಯನ್ನು ನೀಡಲಾಗುತ್ತಿದೆ. ಫೆಬ್ರವರಿ 2017 ರಿಂದ ಪ್ರಾರಂಭಿಸಿ ಎಲ್ಲಾ ಆಧ್ಯತಾ ಮತ್ತು ಅಂತ್ಯೋದಯ ಕುಟುಂಬಗಳಿಗೆ ಅರ್ಧ ಬೆಲೆಯಲ್ಲಿ ತಿಂಗಳಿಗೆ 1 ಕೆ.ಜಿ. ದ್ವಿದಳ ಧಾನ್ಯವನ್ನು ಹೆಚ್ಚುವರಿಯಾಗಿ ನೀಡಲಾಗುತ್ತಿದೆ. ಹೊಸ ಪಡಿತರ ಚೀಟಿಗಳ ವಿತರಣೆಯನ್ನು 7 ಕೆಲಸದ ದಿನಗಳ ಕಾಲಮಿತಿಯನ್ನು ಮಂಜೂರು ಮಾಡುವ ಗಡುವಿನೊಂದಿಗೆ ಇದನ್ನು "ಸಕಾಲ" ದಡಿ ತರಲಾಗಿದೆ.

41. ಕರ್ನಾಟಕವನ್ನು "ಗುಡಿಸಲು ಮುಕ್ತ ರಾಜ್ಯ" ವನ್ನಾಗಿ ಮಾಡುವುದು ನನ್ನ ಸರ್ಕಾರದ ಪ್ರಮುಖ ಗುರಿಯಾಗಿದೆ. ಪ್ರತಿ ವರ್ಷ 3 ಲಕ್ಷ ಮನೆಗಳನ್ನು ನಿರ್ಮಾಣ ಮಾಡುವ ಗುರಿಯಂತೆ ಪ್ರಸಕ್ತ ಸಾಲಿನಲ್ಲಿ 1.93 ಲಕ್ಷ ಮನೆಗಳೊಂದಿಗೆ 2013–14 ರಿಂದ 10.42 ಲಕ್ಷ ಮನೆಗಳನ್ನು ನಿರ್ಮಾಣ ಮಾಡಿದ್ದೇವೆ. ನನ್ನ ಸರ್ಕಾರವು, 6 ಲಕ್ಷ ಹೊಸ ಮನೆಗಳನ್ನು ನಿರ್ಮಾಣ ಮಾಡುವ ಗುರಿಯನ್ನು ಹೊಂದಿದ್ದು, ಫಲಾನುಭವಿಗಳ ಆಯ್ಕೆಯು ಪ್ರಗತಿಯಲ್ಲಿದೆ. ನಗರ ಪ್ರದೇಶಗಳಲ್ಲಿ 893 ಕೋಟಿ ರೂ.ಗಳ ವೆಚ್ಚದಲ್ಲಿ 98 ಕೊಳಚೆ ಪ್ರದೇಶಗಳಲ್ಲಿ ಮೂಲ ಸೌಕರ್ಯ ಸೌಲಭ್ಯಗಳೊಂದಿಗೆ 16,522 ಮನೆಗಳನ್ನು ನಿರ್ಮಾಣ ಮಾಡಲಾಗುತ್ತಿದೆ.

42. ನವೀಕರಿಸಬಹುದಾದ ಇಂಧನ ಸಂಪನ್ಮೂಲಗಳಿಗೆ ಸಂಬಂಧಿಸಿದಂತೆ ವಿಶೇಷ ಒತ್ತು ನೀಡುವುದರೊಂದಿಗೆ ರಾಜ್ಯದಲ್ಲಿ ವಿದ್ಯುತ್ ಉತ್ಪಾದನಾ

ಸಾಮರ್ಥ್ಯವನ್ನು ಹೆಚ್ಚು ಮಾಡಲು ನನ್ನ ಸರ್ಕಾರವು ಬದ್ಧವಾಗಿದೆ. ತುಮಕೂರು ಜಿಲ್ಲೆಯ ಪಾವಗಡ ತಾಲ್ಲೂಕಿನಲ್ಲಿ 2000 ಮೆಗಾವ್ಯಾಟ್ ಸೋಲಾರ್ ಪಾರ್ಕ್‌ನ್ನು ಸ್ಥಾಪಿಸುವ ಕಾರ್ಯ ತೀವ್ರ ಪ್ರಗತಿಯಲ್ಲಿದೆ. “ವಿಕೇಂದ್ರೀಕೃತ ಹಂಚಿಕೆ ಮಾಡಲ್ಪಟ್ಟ ಉತ್ಪಾದನೆ” ಯೋಜನೆ ಅಡಿಯಲ್ಲಿ, ಹಿಂದುಳಿದ 60 ತಾಲ್ಲೂಕುಗಳಲ್ಲಿ ಸೋಲಾರ್ ಯೋಜನೆಗಳನ್ನು ಸ್ಥಾಪಿಸಲು ಕ್ರಮವನ್ನು ಕೈಗೊಳ್ಳಲಾಗಿದೆ. 306 ಮೆಗಾವ್ಯಾಟ್ ಉತ್ಪಾದನಾ ಸಾಮರ್ಥ್ಯ ಹಂಚಿಕೆಯೊಂದಿಗೆ ಸೋಲಾರ್ ಯೋಜನೆಗಳನ್ನು ಕೈಗೊಳ್ಳಲು ಭೂ ಒಡೆತನ ಹೊಂದಿರುವ ರೈತರಿಗೆ ಪ್ರೋತ್ಸಾಹಿಸಲಾಗಿದೆ.

43. ಗ್ರಾಮೀಣ ಪ್ರದೇಶಗಳಿಗೆ ಖಾತರಿಯ ವಿದ್ಯುತ್ ಪೂರೈಕೆ ಮಾಡುವುದಕ್ಕಾಗಿ ಮತ್ತು 129 ತಾಲ್ಲೂಕುಗಳಲ್ಲಿ ನೀರಾವರಿಗೆ ನಿಶ್ಚಿತ ಅವಧಿಯಲ್ಲಿ ವಿದ್ಯುತ್ ಪೂರೈಸುವುದಕ್ಕಾಗಿ “ನಿರಂತರ ಜ್ಯೋತಿ ಯೋಜನೆ”ಯ ಅನುಷ್ಠಾನ ಶೀಘ್ರದಲ್ಲಿ ಪೂರ್ಣಗೊಳ್ಳಲಿದೆ. ಬಳಕೆದಾರರು ಮತ್ತು ಎಸ್ಕಾಂಗಳ ನಡುವಿನ ವಿವಾದಗಳನ್ನು ಪರಿಹರಿಸುವುದಕ್ಕೆ 159 ವಿಧಾನ ಸಭಾ ಕ್ಷೇತ್ರಗಳಲ್ಲಿ ಸಲಹಾ ಸಮಿತಿಗಳನ್ನು ರಚಿಸಲಾಗಿದೆ.

44. ನನ್ನ ಸರ್ಕಾರವು, ರಾಜ್ಯದಲ್ಲಿ ರೈಲ್ವೆ ಮಾರ್ಗಗಳ ಕಾರ್ಯಜಾಲ ಮತ್ತು ವಿಮಾನ ನಿಲ್ದಾಣಗಳ ಅಭಿವೃದ್ಧಿಯ ಬಗ್ಗೆ ವಿಶೇಷ ಒತ್ತು ನೀಡಿದೆ. ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ 2ನೇ ರನ್‌ವೇ ಹಾಗೂ 2ನೇ ಟರ್ಮಿನಲ್ ಕಟ್ಟಡ ನಿರ್ಮಾಣದ ಮೊದಲ ಹಂತದ ಕಾಮಗಾರಿ

ಪ್ರಗತಿಯಲ್ಲಿದೆ. ಬೆಳಗಾವಿ ಮತ್ತು ಹುಬ್ಬಳ್ಳಿಯಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ವಿಮಾನ ನಿಲ್ದಾಣಗಳನ್ನು ಮೇಲ್ದರ್ಜೆಗೇರಿಸಲು ಭಾರತದ ವಿಮಾನ ನಿಲ್ದಾಣಗಳ ಪ್ರಾಧಿಕಾರ ಕ್ರಮ ಕೈಗೊಂಡಿದೆ. ಕಲಬುರಗಿ ವಿಮಾನ ನಿಲ್ದಾಣ ಕಾಮಗಾರಿಯನ್ನು ಪ್ರಾರಂಭಿಸಿದೆ. ಯೋಜನೆಯ ಶೇಕಡಾ 50ರಷ್ಟನ್ನು ರಾಜ್ಯ ಸರ್ಕಾರವೇ ಭರಿಸುವುದರೊಂದಿಗೆ ಉಚಿತ ಭೂಮಿಯನ್ನು ನೀಡುವ ಮೂಲಕ ಭಾರತೀಯ ರೈಲ್ವೆಯ ಸಹಭಾಗಿತ್ವದೊಡನೆ ಅತೀ ಹೆಚ್ಚು ರೈಲ್ವೆ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದ್ದೇವೆ. ರಾಜ್ಯದಲ್ಲಿ 10 ಬೃಹತ್ ರೈಲ್ವೆ ಯೋಜನೆಗಳಲ್ಲಿ ರಾಮನಗರ–ಮೈಸೂರು, ಹಾಸನ–ಬೆಂಗಳೂರು, ಬೀದರ್–ಕಲಬುರಗಿ, ಬಾಗಲಕೋಟೆ–ಕುಡಚಿ ವಿಭಾಗದ ಬಾಗಲಕೋಟೆ–ಕಜ್ಜಿದೋಣಿಯಲ್ಲಿ ಸುರಂಗ ಮಾರ್ಗಗಳು ಮತ್ತು ಯಾದಗಿರಿಯಲ್ಲಿ ರೈಲ್ವೆ ಬೋಗಿ ಕಾರ್ಖಾನೆ ಯೋಜನೆಗಳು ಪ್ರಸಕ್ತ ಸಾಲಿನಲ್ಲಿ ಪೂರ್ಣಗೊಳ್ಳುವುದೆಂದು ನಿರೀಕ್ಷಿಸಲಾಗಿದೆ.

45. ರಾಜ್ಯದಲ್ಲಿ ರಸ್ತೆ ಸಂಪರ್ಕ ಜಾಲವನ್ನು ಮೇಲ್ದರ್ಜೆಗೇರಿಸುವ ಬಗ್ಗೆ ನಾವು ವಿಶೇಷ ಒತ್ತು ನೀಡಿದ್ದೇವೆ. ಕಳೆದ 3 ವರ್ಷಗಳಲ್ಲಿ 8927 ಕಿ.ಮೀ. ರಾಜ್ಯ ಹೆದ್ದಾರಿಗಳು ಮತ್ತು 17,163 ಕಿ.ಮೀ. ಪ್ರಮುಖ ಜಿಲ್ಲಾ ರಸ್ತೆಗಳನ್ನು ಅಭಿವೃದ್ಧಿಗೊಳಿಸಲು ಕ್ರಮಕೈಗೊಳ್ಳಲಾಗಿದೆ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಲೋನಿಗಳಲ್ಲಿ 1992 ಕಿ.ಮೀ. ಮತ್ತು 786 ಕಿ.ಮೀ. ಕಾಂಕ್ರೀಟ್ ರಸ್ತೆಗಳ ಸುಧಾರಣೆಗೆ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಪ್ರಸಕ್ತ ಸಾಲಿನಲ್ಲಿ ನನ್ನ ಸರ್ಕಾರವು, ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ 717

ಕಿ.ಮೀ. ರಾಜ್ಯ ಹೆದ್ದಾರಿಗಳು ಮತ್ತು 3570 ಕಿ.ಮೀ. ಪ್ರಮುಖ ಜಿಲ್ಲಾ ರಸ್ತೆಗಳನ್ನು ಮೇಲ್ದರ್ಜೆಗೆ ಏರಿಸುತ್ತಿದ್ದೇವೆ. ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ 3ನೇ ಹಂತದ ಮೇರೆಗೆ 3500 ಕೋಟಿ ರೂ.ಗಳ ವೆಚ್ಚದಲ್ಲಿ 2795 ಕಿ.ಮೀ. ರಾಜ್ಯ ಹೆದ್ದಾರಿಗಳು ಮತ್ತು 1520 ಕಿ.ಮೀ. ಪ್ರಮುಖ ಜಿಲ್ಲಾ ಹೆದ್ದಾರಿಗಳನ್ನು ಸಹ ನಾವು ಅಭಿವೃದ್ಧಿಪಡಿಸುತ್ತೇವೆ.

46. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಲಯಗಳಲ್ಲಿ ಕರ್ನಾಟಕ, ದೇಶದಲ್ಲಿ ಮೊದಲ ಸ್ಥಾನ ಹೊಂದಿದೆ. ಈ ಕ್ಷೇತ್ರ ಪ್ರತಿ ವರ್ಷ ಹೊಸ ಉದ್ಯೋಗಗಳನ್ನು ಸೃಜಿಸುವುದರ ಜೊತೆಗೆ ಇದರ ಬೆಳವಣಿಗೆಯ ಪ್ರಮಾಣ ವಾರ್ಷಿಕ ಶೇ. 10 ರಿಂದ 12ಕ್ಕೆ ಹೆಚ್ಚಳವಾಗಿದೆ. ಹೊಸ ನವೋದ್ಯಮ ನೀತಿಯನ್ನು ಆರಂಭಿಸುವುದರೊಂದಿಗೆ ರಾಜ್ಯವು ವಿಶ್ವದ ನವೋದ್ಯಮ ಕ್ಷೇತ್ರದಲ್ಲಿ ಅಗ್ರಸ್ಥಾನವನ್ನು ಉಳಿಸಿಕೊಂಡಿದೆ. 4000ಕ್ಕಿಂತ ಹೆಚ್ಚಿನ ನವೋದ್ಯಮಗಳಲ್ಲಿ ಕಳೆದ 2 ವರ್ಷದಲ್ಲಿ 1 ಬಿಲಿಯನ್ ಡಾಲರ್‌ಗಿಂತಲೂ ಹೆಚ್ಚು ಬಂಡವಾಳ ಹೂಡಿಕೆಯನ್ನು ಸ್ವೀಕರಿಸಿದೆ.

47. ಇತ್ತೀಚೆಗೆ, ವಿಶ್ವ ಆರ್ಥಿಕ ವೇದಿಕೆಯಲ್ಲಿ ಬೆಂಗಳೂರು ನಗರವನ್ನು ವಿಶ್ವದ ಅತ್ಯಂತ ಕ್ರಿಯಾಶೀಲ ನಗರವೆಂದು ಪರಿಗಣಿಸಲಾಗಿದೆ. ಸಾರ್ವಜನಿಕ ಸಾರಿಗೆ ಮತ್ತು ವೈಜ್ಞಾನಿಕ ಸಂಚಾರ ನಿರ್ವಹಣೆಯು ಸಂಚಾರ ಸಮಸ್ಯೆಗೆ ಪರಿಹಾರವಾಗಿದೆ. ಬೆಂಗಳೂರು ಮೆಟ್ರೋ ರೈಲು ನಿಗಮವು ಏಪ್ರಿಲ್ 2017 ರಿಂದ ಬೆಂಗಳೂರು ಮೆಟ್ರೋದ 1ನೇ ಹಂತದ 42.38 ಕಿ.ಮೀ.ನ್ನು

ಪೂರ್ಣಗೊಳಿಸುವುದಕ್ಕೆ ಸಿದ್ಧವಾಗಿದೆ. 2ನೇ ಹಂತದ ಕಾಮಗಾರಿಗಳನ್ನು ಪೂರ್ಣಗೊಳಿಸಲು ಶೀಘ್ರಗತಿಯಲ್ಲಿ ಕಾರ್ಯಗತಗೊಳಿಸಲಾಗುತ್ತಿದೆ. ನನ್ನ ಸರ್ಕಾರವು, ರೈಲ್ವೆ ಇಲಾಖೆಯ ಸಹಯೋಗದಲ್ಲಿ ಬೆಂಗಳೂರು ಮೆಟ್ರೊಪಾಲಿಟನ್ ಪ್ರದೇಶಕ್ಕಾಗಿ ಉಪ–ನಗರ ರೈಲ್ವೆ ಕಾಮಗಾರಿ ಪ್ರಾರಂಭಿಸಲು ರೈಲ್ವೆ ಮಂತ್ರಾಲಯದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಲಾಗಿದೆ.

48. ಪ್ರಸಕ್ತ ಸಾಲಿನಲ್ಲಿ ಮತ್ತು ಮುಂದಿನ ಸಾಲಿನ ಅವಧಿಯಲ್ಲಿ, ಬೆಂಗಳೂರಿನಲ್ಲಿ 7300 ಕೋಟಿ ರೂ.ಗಳಷ್ಟು ಪ್ರಮಾಣದ ವಿವಿಧ ರಸ್ತೆ ಮತ್ತು ಮೂಲ ಸೌಕರ್ಯ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಹೊಸದಾಗಿ ಸೇರ್ಪಡೆಯಾಗಿರುವ 110 ಗ್ರಾಮಗಳಿಗೆ ಕಾವೇರಿ ನೀರನ್ನು ಒದಗಿಸಲಾಗುವುದು.

49. ರಾಜ್ಯದ ಇತರ ನಗರ ಅದರಲ್ಲೂ ವಿಶೇಷವಾಗಿ ಪಟ್ಟಣಗಳಲ್ಲಿ 427 ಕೋಟಿ ರೂ.ಗಳಷ್ಟು ಪ್ರಮಾಣದ 11 ನೀರು ಸರಬರಾಜು ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ. 18 ಪಟ್ಟಣಗಳಲ್ಲಿ ಅಮೃತ ಯೋಜನೆ ಅಡಿಯಲ್ಲಿ 1279 ಕೋಟಿ ರೂ.ಗಳ ವೆಚ್ಚದಲ್ಲಿ ನೀರು ಸರಬರಾಜು ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಜೊತೆಗೆ ಪ್ರಸಕ್ತ ಸಾಲಿನಲ್ಲಿ 542 ಕೋಟಿ ರೂ.ಗಳ ವೆಚ್ಚದಲ್ಲಿ 17 ಒಳಚರಂಡಿ ಯೋಜನೆಗಳನ್ನು ಕೈಗೊಳ್ಳಲಾಗುತ್ತಿದೆ.

50. ನನ್ನ ಸರ್ಕಾರವು, ಪ್ರಸಕ್ತ ವರ್ಷದಲ್ಲಿ 2836 ಕೋಟಿ ರೂ.ಗಳ ವೆಚ್ಚದಲ್ಲಿ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಪಟ್ಟಣಗಳಿಗೆ ನಗರೋತ್ಥಾನ ಯೋಜನೆಯ 3ನೇ ಹಂತವನ್ನು ಅನುಮೋದಿಸಿದೆ.

51. ಕೈಗಾರಿಕಾ ನೀತಿ ಮತ್ತು ಪ್ರವರ್ಧನೆ ಇಲಾಖೆಯ ಪ್ರಕಾರ ಉದ್ದೇಶಿತ ಬಂಡವಾಳ ಹೂಡಿಕೆಯಲ್ಲಿ ಕರ್ನಾಟಕ ರಾಜ್ಯವು ಮೊದಲ ಸ್ಥಾನದಲ್ಲಿದೆ. 2016ನೇ ಸಾಲಿನಲ್ಲಿ 1,49,587 ಕೋಟಿ ರೂ.ಗಳ ಉದ್ದೇಶಿತ ಬಂಡವಾಳ ಹೂಡಿಕೆಯನ್ನು ಸ್ವೀಕರಿಸಲಾಗಿದೆ. ಕರ್ನಾಟಕ ಬಂಡವಾಳ ಹೂಡಿಕೆ ವೇದಿಕೆ ಎಂಬ ಲಾಭ ರಹಿತ ಕಂಪನಿಯೊಂದನ್ನು ನೋಂದಾಯಿಸಿದೆ. ಜಾಗತಿಕ ಏರೋಸ್ಪೇಸ್ ಕೈಗಾರಿಕೆಯಿಂದ ಬಂಡವಾಳ ಹೂಡುವುದನ್ನು ಆಕರ್ಷಿಸಲು 2013–23ರ ಏರೋಸ್ಪೇಸ್ ನೀತಿಗೆ ತಿದ್ದುಪಡಿ ಮಾಡಲಾಗಿದೆ.

52. ನನ್ನ ಸರ್ಕಾರವು, ಬೆಂಗಳೂರಿನಲ್ಲಿ ವಿದೇಶಾಂಗ ವ್ಯವಹಾರ ಸಚಿವಾಲಯದ ಸಹಯೋಗದೊಂದಿಗೆ "ಪ್ರವಾಸಿ ಭಾರತೀಯ ದಿವಸ್–2017"ನ್ನು ಯಶಸ್ವಿಯಾಗಿ ನಡೆಸಿದೆ. ಅದರಲ್ಲಿ ಜಗತ್ತಿನಾದ್ಯಂತ ಬಂದಿರುವ 2000 ಪ್ರತಿನಿಧಿಗಳು ಸೇರಿದಂತೆ 7200 ಪ್ರತಿನಿಧಿಗಳು ಭಾಗವಹಿಸಿದ್ದರು. ನನ್ನ ಸರ್ಕಾರವು, ಕರ್ನಾಟಕದಲ್ಲಿ ನೇರ ಬಂಡವಾಳ ಹೂಡಿಕೆಗೆ ಪ್ರೋತ್ಸಾಹ ನೀಡಲು ಮತ್ತು ಸಾಗರೋತ್ತರ ಕನ್ನಡಿಗರ ಕಲ್ಯಾಣವನ್ನು ಖಾತ್ರಿಪಡಿಸಲು ಹೊಸ ಅನಿವಾಸಿ ಭಾರತೀಯ ನೀತಿಯನ್ನು ಸಹ ಪ್ರಕಟಿಸಿದೆ.

53. ಕುಶಲ ಮಾನವ ಸಂಪನ್ಮೂಲವನ್ನು ಪಡೆಯಲು ಸೀಮೆನ್ಸ್ ಕಂಪನಿಯ ಸಹಯೋಗದೊಂದಿಗೆ ಬೆಂಗಳೂರು, ಕಲಬುರಗಿ, ದಾಂಡೇಲಿ ಮತ್ತು ಮೈಸೂರಿನಲ್ಲಿ ಸರ್ಕಾರ ಉಪಕರಣಗಾರ ಮತ್ತು ತರಬೇತಿ ಕೇಂದ್ರದ ಉಪ ಕೇಂದ್ರಗಳಲ್ಲಿ 4 ಪ್ರಾವೀಣ್ಯತೆ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಸಾರಥಿ, ಚಿಕ್ಕಹೊಸಹಳ್ಳಿ, ಮುತ್ತುಗದಹಳ್ಳಿ, ಉಳ್ಳಾರ್ತಿಕಾವಲ್, ಕುದಪುರ ಮತ್ತು ಹಿರೆಶಕುನಹಳ್ಳಿಗಳಲ್ಲಿ ಹೊಸ ಕೈಗಾರಿಕಾ ಎಸ್ಟೇಟ್ ಸ್ಥಾಪಿಸಲು ಕರ್ನಾಟಕ ಸಣ್ಣ ಪ್ರಮಾಣ ಕೈಗಾರಿಕಾ ಅಭಿವೃದ್ಧಿ ನಿಗಮ ಕ್ರಮ ಕೈಗೊಂಡಿದೆ.

54. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಮತ್ತು ಮಹಾನಗರ ಸಾರಿಗೆ ಕಂಪನಿಗಳು ದೇಶದಲ್ಲೇ ಅತ್ಯುತ್ತಮವೆನಿಸಿಕೊಂಡಿವೆ. ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಮಾನ್ಯತೆ ಮತ್ತು ಪ್ರಶಸ್ತಿಗಳು ಎರಡನ್ನೂ ಗಳಿಸಿವೆ. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಕಾರ್ಯಾರಂಭ ಮಾಡಿದಾಗಿನಿಂದ ಇಲ್ಲಿಯವರೆಗೆ 164 ಪ್ರಶಸ್ತಿಗಳನ್ನು ಪಡೆದಿದೆ. ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು 100 ಪ್ರಶಸ್ತಿಗಳನ್ನು ಪಡೆದಿದೆ. ಇತ್ತೀಚೆಗೆ ಮೈಸೂರು ಚತುರ ಸಾರಿಗೆ ವ್ಯವಸ್ಥೆ ಯೋಜನೆಗೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ರಾಷ್ಟ್ರೀಯ ಇ–ಆಡಳಿತ ಪ್ರಶಸ್ತಿಯನ್ನು ಸಹ ತನ್ನದಾಗಿಸಿಕೊಂಡಿದೆ. ಕಳೆದ 3 ವರ್ಷಗಳಲ್ಲಿ, ರಸ್ತೆ ಸಾರಿಗೆ ಸಂಸ್ಥೆಗಳಿಗೆ 3533 ಹೊಸ ಬಸ್‌ಗಳ ಸೇರ್ಪಡೆಯಾಗಿದೆ. 21 ಹೊಸ ಡಿಪೋಗಳನ್ನು ಮತ್ತು 21 ನೂತನ ಬಸ್ ನಿಲ್ದಾಣಗಳನ್ನು ನಿರ್ಮಾಣ ಮಾಡಲಾಗಿದೆ ಮತ್ತು 6262 ನೌಕರರನ್ನು ನೇಮಕ ಮಾಡಿದೆ.

55. ಕಳೆದ 3 ವರ್ಷಗಳ ಅವಧಿಯಲ್ಲಿ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡಲು 41 ನಗರಗಳಲ್ಲಿ, 1793 ನಗರ ಬಸ್‌ಗಳನ್ನು ಪ್ರಾರಂಭಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ, ಎಲೆಕ್ಟ್ರಾನಿಕ್ ಟಿಕೆಟ್ ಯಂತ್ರಗಳು ಮತ್ತು ಜಿಪಿಎಸ್ ಆಧಾರಿತ ವಾಹನ ಶೋಧನ ಘಟಕಗಳೊಂದಿಗೆ ಚತುರ ಸಾರಿಗೆ ವ್ಯವಸ್ಥೆಯನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ ಅನುಷ್ಠಾನಗೊಳಿಸಿದೆ.

56. ನನ್ನ ಸರ್ಕಾರವು, ಬೆಂಗಳೂರಿನಲ್ಲಿ ಒತ್ತುವರಿ ಮಾಡಿದ ಸರ್ಕಾರಿ ಭೂಮಿಗಳನ್ನು ಬಳಸಲು ಕ್ರಮಕೈಗೊಂಡಿದೆ. ಕಳೆದ ಮೂರು ವರ್ಷಗಳಲ್ಲಿ 4700 ಎಕರೆ ಭೂಮಿಯನ್ನು ವಶಪಡಿಸಿಕೊಂಡಿದೆ. ನನ್ನ ಸರ್ಕಾರವು, ಬೆಂಗಳೂರಿನಲ್ಲಿ ಭೂಮಿಯನ್ನು ವಶಪಡಿಸಿಕೊಂಡ ಪ್ರಕರಣಗಳಿಗೆ ವಿಶೇಷ ನ್ಯಾಯಾಲಯವನ್ನು ಮತ್ತು 22 ಹೊಸ ಕೌಟುಂಬಿಕ ನ್ಯಾಯಾಲಯಗಳನ್ನು ಸ್ಥಾಪಿಸಿದೆ. 2016ನೇ ನವೆಂಬರ್ ಕೊನೆಗೆ ಸುಮಾರು 21 ಲಕ್ಷ ಪ್ರಕರಣಗಳು ಲೋಕ್ ಅದಾಲತ್ ಮುಂದೆ ಇತ್ಯರ್ಥವಾಗಿವೆ. 2016 ನೇ ಸಾಲಿನಲ್ಲಿ, 22 ಜಿಲ್ಲಾ ನ್ಯಾಯಾಧೀಶರುಗಳು ಮತ್ತು 119 ಸಿವಿಲ್ ನ್ಯಾಯಾಧೀಶರುಗಳನ್ನು ಸಹ ನೇಮಕ ಮಾಡಿಕೊಳ್ಳಲಾಗಿದೆ.

57. ಕ್ರೀಡೆಗಳನ್ನು ಪ್ರೋತ್ಸಾಹಿಸಲು ನನ್ನ ಸರ್ಕಾರವು, ರಾಜ್ಯದಲ್ಲಿ 13 ಕ್ರೀಡಾಂಗಣಗಳಲ್ಲಿ ಸಿಂಥೆಟಿಕ್ ಅಥ್ಲೆಟಿಕ್ ಪಥ ಸೌಲಭ್ಯ ಒದಗಿಸುವುದರ ಜೊತೆಗೆ, ಬೆಳಗಾವಿಯಲ್ಲಿ ವಿವಿಧೋದ್ದೇಶದ ಒಳಾಂಗಣ ಕ್ರೀಡಾಂಗಣ ಮತ್ತು ವಿಜಯಪುರದಲ್ಲಿ ಸೈಕ್ಲಿಂಗ್‌ಗಾಗಿ ಆಧುನಿಕ ಸೌಲಭ್ಯವುಳ್ಳ ಪಥವನ್ನು

ನಿರ್ಮಿಸಿದೆ. ಬೆಂಗಳೂರಿನ ಹಾಕಿ ಕ್ರೀಡಾಂಗಣವನ್ನು ಮೇಲ್ದರ್ಜೆಗೇರಿಸಲಾಗಿದೆ.

58. ಇತ್ತೀಚೆಗೆ, ರಾಜ್ಯಕ್ಕೆ ಹಂಚಿಕೆಯಾದ ಯೋಜನೆಗಳ ಪಾಲು ಮತ್ತು ಅಂಶಗಳನ್ನು ಒಳಗೊಂಡು, ಕೇಂದ್ರ ಪ್ರಾಯೋಜಿತ ಯೋಜನೆಗಳನ್ನು ರೂಪಿಸುವಲ್ಲಿ ಕೆಲವು ಬದಲಾವಣೆಗಳನ್ನು ಮಾಡಲಾಗಿದೆ. ನನ್ನ ಸರ್ಕಾರವು, ಇಂಥಹ ಬದಲಾವಣೆಗಳಿಂದ ಮೂಲಮಟ್ಟದಲ್ಲಿ ಆ ಯೋಜನೆಗಳ ಅನುಷ್ಠಾನಕ್ಕೆ ಭಾದಕ ಉಂಟಾಗದಂತೆ ಅನುದಾನವನ್ನು ಮುಂಗಡವಾಗಿ ಬಿಡುಗಡೆಗೊಳಿಸಿ, ಅವುಗಳನ್ನು ಸುಗಮವಾಗಿ ಅನುಷ್ಠಾನಗೊಳಿಸಿದೆ.

59. ಅಂತಿಮವಾಗಿ, ನನ್ನ ಸರ್ಕಾರವು, ಪ್ರಗತಿಪರ ಮತ್ತು ಸರ್ವರನ್ನೊಳಗೊಂಡ ಸಮಾಜದ ನಿರ್ಮಾಣ ಮಾಡುವ ಆಶಯದೊಂದಿಗೆ ಕರ್ನಾಟಕವನ್ನು ಪ್ರಗತಿಯ ಹಾದಿಯಲ್ಲಿ ಮುನ್ನಡೆಸಲು ಬದ್ಧವಾಗಿದೆ. ತತ್ವಾಧಾರಿತವಾದ ಸಮಾಜವು ಸಮಾನತೆ ಮತ್ತು ನ್ಯಾಯ ಪಾಲನೆಯ ಉದ್ದೇಶ ಮಾತ್ರವಲ್ಲದೇ, ಅನುಕಂಪ ಮತ್ತು ಸಹನೆಯುನ್ನೂ ಒಳಗೊಂಡಿರಬೇಕು. ಕರ್ನಾಟಕದ ವೈಭವಯುತ ಇತಿಹಾಸ ಮತ್ತು ಪರಂಪರೆಯನ್ನು ಸ್ಮರಿಸಿಕೊಂಡು ರಾಜ್ಯದ ಉಜ್ವಲ ಭವಿಷ್ಯ ನಿರ್ಮಾಣಕ್ಕಾಗಿ ನನ್ನೊಂದಿಗೆ ಕೈಜೋಡಿಸಲು ಈ ಸದನದ ಸದಸ್ಯರನ್ನು ನಾನು ಕೋರುತ್ತೇನೆ.

**ಜೈ ಹಿಂದ್**

**ಜೈ ಕರ್ನಾಟಕ**

**********